ಹುತಾತ್ಮ

ತಿಮ್ಮನಗೌಡ ಪಾಟೀಲ

(ಮೆಣಸಿನ ಹಾಳ)

ಸ್ವಾತಂತ್ರ್ಯ ಯೋಧರ ಸಂಘ, ರಾಣೆಬೆನ್ನೂರ
(೧೯೭೫)

ನನ್ನ ನಿವೇದನೆ

ನಮ್ಮ ತಾಲ್ಲೂಕಿನ ಹುತಾತ್ಮರಾದ ಶ್ರೀ ತಿಮ್ಮನಗೌಡರ ಜೀವನ ಚರಿತ್ರೆ ಮತ್ತು ಅವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಮಾಡಿದ ಕಾರ್ಯದ ಸವಿಸ್ತಾರ ವಿಷಯವನ್ನೊಳಗೊಂಡ ಒಂದು ಕಿರುಹೊತ್ತಿಗೆಯನ್ನು ನಮ್ಮ ಸಂಘದಿಂದ ಪ್ರಸಿದ್ಧಿಸಬೇಕೆಂಬ ಬಯಕೆ ಈಗ ಈಡೇರಿದೆ. ಇಷ್ಟು ವಿಲಂಬವಾಗಲು ದಿ. ಹು. ತಿಮ್ಮನಗೌಡರ ಭಾವಚಿತ್ರ, ಸಂಗಡಿಗರ ಭಾವಚಿತ್ರ ಮತ್ತು ಅವರು ಮಾಡಿದ ಕಾರ್ಯ ವಿವರಗಳು ಲಭ್ಯವಾಗದೆ ತೊಂದರೆಯಾಯಿತು. ಆದಾಗ್ಯೂ ಹರಪನಹಳ್ಳಿಯ ಟಪಾಲ ಬಸ್ ಲೂಟಿ ಮಾಡಿದ್ದೂ ಮಾಹಿತಿ ದೊರೆಯಲಿಲ್ಲ. ಅದನ್ನು ತಾಲ್ಲೂಕು ಸ್ವಾತಂತ್ರ್ಯ ಯೋಧರ ಚರಿತ್ರೆಯಲ್ಲಿ ತರುತ್ತೇನೆ, ಆಗ್ಗೆ ಬಿಟ್ಟು ಹೋದ ತಿಮ್ಮನಗೌಡರ ಸಂಗಡಿಗರ ಭಾವಚಿತ್ರ ಮತ್ತು ಕಾರ್ಯವಿವರಣೆ ಪ್ರಸಿದ್ಧಿಸುವೆ. ಹು. ತಿಮ್ಮನಗೌಡರ ಭಾವಚಿತ್ರ ಕೊನೆಗೂ ಸಿಗಲಿಲ್ಲದ್ದಕ್ಕಾಗಿ ವಿಷಾದಿಸುವೆ.

ಈ ಕಿರುಹೊತ್ತಿಗೆಯನ್ನು ಪ್ರಕಟಿಸಲು ಎಲ್ಲ ಕಾರ್ಯದಲ್ಲಿ ಸಹಕಾರ ಸಹಾಯ ತಾಲ್ಲೂಕಿನ ಹಿರಿಯ ಯೋಧರೂ ಮುಖಂಡರೂ ಆದ ಶ್ರೀ ಕಲ್ಲನಗೌಡ ಪಾಟೀಲರದೆ. ಆದಷ್ಟು ಬೇಗ ತಾಲ್ಲೂಕ ಸ್ವಾತಂತ್ರ್ಯ ಯೋಧರ ಚರಿತ್ರೆ ನಮ್ಮ ಸಂಘದಿಂದ ಪ್ರಸಿದ್ಧಿಸುತ್ತೇನೆ. ಆ ದಿಕ್ಕೆಯಲ್ಲಿ ಸಾಕಷ್ಟು ವಿಷಯ ಸಂಗ್ರಹವಾಗಿದೆಯೆಂದು, ತಾಲ್ಲೂಕಿನ ಜನತೆಯ ಮುಂದೆ ಈ ಚರಿತ್ರೆ ನೀಡುವೆ.

ಅಧ್ಯಕ್ಷ

೧೪-೧೧-೬೫ ರಾಣೇಬೆನ್ನೂರ ಸ್ವಾ। ಯೋ। ಸಂಘ

ರಾಣೇಬೆನ್ನೂರ

ರಕ್ಷಾಕವಚದ ಕೊನೆಯ ಪುಟದಲ್ಲಿ ದಾಂಡಿ ಉಪ್ಪಿನ ಸತ್ಯಾಗ್ರಹಿ ಹು। ಮಹದೇವ ಮೈಲಾರ, ಅವರ ಧರ್ಮಪತ್ನಿ ಸಿದ್ದಮ್ಮ ಅವರೊಡನೆ ಕೆ. ಎಫ್. ಪಾಟೀಲರು.

(4) ~~ಕಿತ್ತೂರ ರಾಜಸ್ಥಾನ ಮಿಯುಸಿಯಂ ಬೆಳಗಾವಿ~~
ಸ್ವಾಧೀನಪಡಿಸಿಕೊಂಡಿದೆ.
15/7/86

ಕೆಚ್ಚೆದೆಯ ವೀರ ಹುತಾತ್ಮ

ತಿಮ್ಮನಗೌಡ ಪಾಟೀಲ

(ಮೆಣಸಿನಹಾಳ)

ವಿಕ್ರಮಗಾರ ಇಲಾಖೆಗೆ ಸ್ವಾಧೀನಪಡಿಸಿಕೊಂಡಿದೆ
25/7/86

PATIL K. F.
HANUMANA MATTI P.O:
DIST. DHARWAR

೨೬ - ೧ - ೧೯೭೫

ಸಂಗ್ರಹ ಮತ್ತು ಪ್ರಕಟಣೆ :
ಸ್ವಾತಂತ್ರ್ಯ ಯೋಧರ ಸಂಘ
ರಾಣೆಬೆನ್ನೂರು

ಮುನ್ನುಡಿ

ಹುತಾತ್ಮ ಕೆಚ್ಚೆದೆಯ ವೀರ ತಿಮ್ಮನಗೌಡ ಮೆಣಸಿನಹಾಳ ಇವರ ಬಗೆಗೆ ೧೯೪೭ರಲ್ಲಿಯೇ ಶ್ರೀ ಬ್ಯಾಳಿ ಎಂಬುವರು ಚಿಕ್ಕದಾದ ಒಂದು ಪ್ರಕಟಣೆ ಮಾಡಿದ್ದರು. ಆದಕ್ಕೆ ನಾನೇ ಮುನ್ನುಡಿ ಬರೆದಿದ್ದೆ. ಈಗ ಆ ಪ್ರತಿಗಳು ಲಭ್ಯವಿಲ್ಲ. ಮುಂದೆ ಅಂಥ ಎಷ್ಟೋ ಪ್ರಯತ್ನಗಳು ನಡೆದು ಸ್ವಾತಂತ್ರ್ಯ ಸಂಗ್ರಾಮದ ವಿವಿಧ ಚಟುವಟಿಕೆಗಳು ಬೆಳಿಗೆ ಬಂದಿವೆ. ಈ ದಿಸೆಯಲ್ಲಿ ತರುಣ ಸ್ನೇಹಿತರಾದ ಪ್ರೊ|| ಸೂರ್ಯನಾಥ ಕಾಮತರು ಬೃಹತ್ ಗ್ರಂಥದ ಮೊದಲ ಸಂಪುಟವೊಂದನ್ನು ಈಗಾಗಲೇ ಪ್ರಕಟಿಸಿದ್ದಾರೆ.

ಹುತಾತ್ಮ ತಿಮ್ಮನಗೌಡರ ಚರಿತ್ರೆಯ ಪ್ರಕಟಿಸಬೇಕೆಂದು ನನಗೆ ಅನೇಕ ಸ್ನೇಹಿತರು ಬಹುಕಾಲದಿಂದ ದುಂಬಾಲು ಬಿದ್ದಿದ್ದರೂ ಅದು ಸಾಧ್ಯವಾಗಿರಲಿಲ್ಲ. ರಾಣೆಬೆನ್ನೂರಿನ ಸ್ವಾತಂತ್ರ್ಯ ಯೋಧರ ಸಂಘಟಕರಾದ ಶ್ರೀ ಸದಾಶಿವಪ್ಪ ಗುರಪ್ಪನವರ ನೇಜ್ಜೇರಿ ಇವರ ಪ್ರಯತ್ನದಿಂದ ಇದೀಗ ಆ ಕಾರ್ಯ ನೆರವೇರಿದ್ದು, ನನ್ನ ಕರ್ತವ್ಯದ ಭಾರ ನನ್ನು ಕಡಿಮೆ ಮಾಡಿದೆ. ಅವರೇ ಅದನ್ನು ಬರೆಯಿಸಿ ತಂದಾಗ ಅದರಲ್ಲಿನ ವಿವರಗಳನ್ನು ತಿಮ್ಮನಗೌಡರೊಡನೆ ಕಾರ್ಯ ಮಾಡಿದ ಇತರ ಸ್ನೇಹಿತರೊಡನೆ ಚರ್ಚಿಸಿ, ಪುನರವರಿಕೆ ಮಾಡಿಕೊಂಡನಂತರ ಮತ್ತು ಲಕ್ಷ್ಯಕ್ಕೆ ಬಂದ ಇನ್ನೂ ಕೆಲ ವಿಷಯಗಳನ್ನು ಅನುಬಂಧವಾಗಿ ಸೇರಿಸಿದ್ದೇನೆ. ಅಂದಿನ ಸ್ವಾರಸ್ಯಕಾರಕ, ಮಹತ್ವದ ಸಂಗತಿಗಳೆಷ್ಟೋ ಬೆಳಕು ಕಾಣದೆ ಇನ್ನು ಹಾಗೆ ಉಳಿದಿವೆ. ೫೦ ವರ್ಷಗಳ ಹಿಂದಿನದನ್ನು ನೆನಪಿಟ್ಟುಕೊಂಡು ಹೇಳುವದೂ ಕಷ್ಟ. ಹಾಗೆ ಹೇಳ ಬಲ್ಲವರೂ ವಿರಳ.

ಹು|| ತಿಮ್ಮನಗೌಡರೊಡನೆ ಸಹಕಾರ್ಯಕರ್ತರಾಗಿದ್ದ ಹು|| ಮಹದೇವಪ್ಪ ಮೈಲಾರ ಅವರ ಚರಿತ್ರೆಯನ್ನು ಅನೇಕರು ಪ್ರಕಟಿಸಿದ್ದಾರೆ. ಮೋಟೆಬೆನ್ನೂರಿ ಹು|| ಮಹದೇವ ಮೈಲಾರ ಅವರು ರಾಷ್ಟ್ರಪಿತ ಬಾಪೂಜಿಯವರ ಸಾಬರಮತಿ ಆಶ್ರಯದಲ್ಲಿ ಗಾಂಧೀಜಿರವರ ಪ್ರತ್ಯಕ್ಷವಾದ ನೇರ ಸಂಪರ್ಕದಲ್ಲಿ ಬೆಳೆದು, ಅವರ ನೆಚ್ಚಿನ ಶಿಷ್ಯರಾಗಿ ಉಪ್ಪಿನ ಸತ್ಯಾಗ್ರಹದ ದಾಂಡೀ ಯಾತ್ರೆಯಲ್ಲಿ, ಕರ್ನಾಟಕದ ಏಕಮೇವ ಪ್ರತಿನಿಧಿ ಆಗಿ ಕರ್ನಾಟಕದ ಕೀರ್ತಿ ಕಳಸವನ್ನು ಭಾರತದಲ್ಲಿ ಬೆಳಗಿದವರು. ಸಂಘಟನಾ ಚತುರ, ಸರ್ವೋದಯ ಕಾರ್ಯಕರ್ತರೂ ಆದ ಕರಿಯಪ್ಪ ಸಂಗೂರ ಅವರೊಬ್ಬರು ಹಾಗೂ ತಿವಣ್ಣ ನೆಶ್ವಿ ಅವರು ಮಾತ್ರ ಅಂದಿನ ಧಾರವಾಡ ಜಿಲ್ಲೆಯ ದಕ್ಷಿಣಭಾಗದ ವಿಧ್ವಂಸಕ ಚಟುವಟಿಕೆಗಳ ನಾಯಕರಲ್ಲಿ ಜೀವಂತವಿದ್ದಾರೆ. ಅವರೊಡನೆ ಆದೇಶದಿಂದ ಹೋರಾಡಿದ ಇನ್ನೂ ೫೦-೬೦ ಕಾರ್ಯಕರ್ತರೂ ಇನ್ನೂ ಜೀವಂತವಿದ್ದಾರೆ.

ರಾಣೆಬೆನ್ನೂರ ಸ್ವಾತಂತ್ರ್ಯ ಯೋಧರ ಸಂಘವು ಈ ಪ್ರಕಟಣೆಗೆ ಮುಂದು ಬಂದುದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು.

ಹನುಮನಮಟ್ಟಿ
ತಾ|| ರಾಣೆಬೆನ್ನೂರು, ಜಿ|| ಧಾರವಾಡ

ಪಾಟೀಲ ಕಲ್ಲನಗೌಡ
೨೬-೧-೧೯೬೫

ಕೆಚ್ಚೆದೆಯ ವೀರ ಹುತಾತ್ಮಾ

ತಿಮ್ಮನಗೌಡ ಪಾಟೀಲ ಮೆಣಸಿನಹಾಳ

೧೯೪೨ ನೇ ಇಸ್ವಿಯಲ್ಲಿ ಮುಂಬೈಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ನಮ್ಮ ರಾಷ್ಟ್ರಪಿತಾ ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ (ಕ್ವಿಟ್ ಇಂಡಿಯಾ) ಅಂದರೆ "ಬ್ರಿಟಿಶರೇ ಭಾರತದಿಂದ ತೊಲಗಿರಿ." ಎಂದು ಘೋಷಿಸಿದರಷ್ಟೇ ಈ ಹೋರಾಟವು ನಮ್ಮ ಸ್ವಾತಂತ್ರ್ಯದ ಅಂತಿಮ ಹೋರಾಟ; ಇದರಲ್ಲಿ ಪೂಜ್ಯ ಬಾಪೂಜಿಯವರು (Do or Die) "ಮಾಡು ಇಲ್ಲವೆ ಮಡಿ" ಎಂಬ ಆವೇಶವನ್ನಿತ್ತರು. ಈ ಕರೆಗೆ ಓಗೊಟ್ಟು ಭಾರತದಲ್ಲಿ ಬ್ರಿಟಿಶ ಸರಕಾರದ ವಿರುದ್ಧ ಬಂಡೆಬ್ಬಿಸಿ, ಮಾಡಿ ಮಡಿದ ಅನೇಕ ವೀರ ಹುತಾತ್ಮರಲ್ಲಿ ಮೆಣಸಿನಹಾಳದ ತಿಮ್ಮನಗೌಡ ಪಾಟೀಲರು ಒಬ್ಬರು. ಈಗಿನ ರಾಣೆಬೆನ್ನೂರ ತಾಲ್ಲೂಕಿಗೊಬ್ಬ ತಿಮ್ಮನಗೌಡರಲ್ಲದೆ ಮತ್ತೊಬ್ಬ ಹುತಾತ್ಮರಿಲ್ಲ ಎಂಬುದು ಚಾರಿತ್ರ್ಯಕ ಸಂಗತಿಯಾಗಿದೆ.

ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಯ ರಾಣೇಬೆನ್ನೂರ ತಾಲ್ಲೂಕದಲ್ಲಿ ತುಮ್ಮಿನಕಟ್ಟಿ ಎಂಬ ದೊಡ್ಡ ಊರಿನ ಹತ್ತಿರ ಮೆಣಸಿನಾಳ ಎಂಬ ಚಿಕ್ಕ ಹಳ್ಳಿ. ಅಲ್ಲಿ ೧೯೧೧ನೇ ಇಸ್ವಿ ಅಕ್ಟೋಬರ ತಿಂಗಳ ದಿನಾಂಕ ೮ ರಂದು ತಿಮ್ಮನಗೌಡರು ಜನಿಸಿದರು. ಹನುಮಗೌಡ, ನೀಲಮ್ಮ ಎಂಬ ದಂಪತಿಗಳು ಇವರ ತಂದೆ ತಾಯಿಗಳು. ಶ್ರೀ ಹನುಮಗೌಡರಿಗೆ ಮೂರು ಮಂದಿ ಗಂಡು ಮಕ್ಕಳು. ಅವರಲ್ಲಿ ದಿ॥ ತಿಮ್ಮನಗೌಡರು ಕಿರಿಯವರು. ಈ ಮನೆತನದ ಉದ್ಯೋಗ ಕೃಷಿ.

ವಿದ್ಯಾಭ್ಯಾಸ

ಹುತಾತ್ಮಾ ತಿಮ್ಮನಗೌಡರು ತಮ್ಮ ನೆರೆಯ ಗ್ರಾಮವಾದ ತುಮ್ಮಿನ ಕಟ್ಟಿಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಏಳನೇಯಿಯತ್ತಿಯವರೆಗೆ

ಅಭ್ಯಾಸಮಾಡಿದರು. ವಿದ್ಯಾರ್ಥಿಗಳಿದ್ದಾಗ ಶಾರೀರಕ ಚಟುವಟಿಕೆಯಲ್ಲಿ ಇವರ ಕೈಮೇಲು. ಓಡುವುದರಲ್ಲಿ ಇವರನ್ನು ಮೀರಿಸುವ ವಿದ್ಯಾರ್ಥಿಗಳು ಇದ್ದಿಲ್ಲ. ಇವರು ವಿದ್ಯಾರ್ಥಿಗಳ ಮುಖಂಡರಾಗಿ ಪ್ರತಿಯೊಂದು ಚಟುವಟಿಕೆಗಳಲ್ಲಿ ಪಾತ್ರವಹಿಸುತ್ತಿದ್ದರು. ೧೯೩೦ ರಲ್ಲಿ ಕಾಂಗ್ರೆಸ್ ಚಳವಳಿಯಲ್ಲಿ ಪ್ರಚಾರಕ್ಕೆ ಬರತಕ್ಕ ಎಲ್ಲ ದೇಶ ಭಕ್ತರನ್ನು ಕಂಡು, ತನ್ನ ವಿದ್ಯಾರ್ಥಿ ವೃಂದ ವನ್ನು ಕೂಡಿಕೊಂಡು ಅವರಿಗೆ ಸಹಾಯ ಮಾಡುತ್ತಿದ್ದರು.

ಸಂಗ್ರಾಮಕ್ಕೆ ಧುಮಿಕಿದ್ದು

ದಿ॥ ತಿಮ್ಮನಗೌಡರು. ತುಮ್ಮಿನಕಟ್ಟಿ ಗ್ರಾಮದಲ್ಲಿ ಕನ್ನಡ ಎಳನೇಯಿಯ ತ್ತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುವಾಗ ಮುಖ್ಯ ಗುರುಗಳಾಗಿ ಶ್ರೀ ಬಸನ ಗೌಡ ಶಿದ್ದನಗೌಡ ಬಳ್ಳೂರ ಎಂಬ ಆದರ್ಶ ಗುರುಗಳಿದ್ದರು. ಇವರು ವಿದ್ಯಾ ರ್ಥಿಗಳ ವಿದ್ಯಾರ್ಜನೆಗೆ ಸರ್ವವಿಧದಿಂದ ಸಹಾಯ ಮಾಡುತ್ತಿದ್ದರು. ಹೀಗಾಗಿ ಈ ಗುರುಗಳ ಕಾಲಕ್ಕೆ ತುಮ್ಮಿನಕಟ್ಟಿ ಶಾಲೆಯಲ್ಲಿ ಧಾರವಾಡ ಜಿಲ್ಲೆಯ ನಾನಾ ಕಡೆಯ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಸೇರಿದ್ದರು. ಆದರಿಂದ ತುಮ್ಮಿನಕಟ್ಟಿ ಕನ್ನಡ ಗಂಡು ಮಕ್ಕಳ ಶಾಲೆ ಕೀರ್ತಿವೆತ್ತು ಪ್ರಕಾಶಿಸುತ್ತಿತ್ತು. ವಿದ್ಯಾರ್ಥಿ ಗಳಿಗೆ ತಂಗಲು ಶಾಲಾ ಇಮಾರತಿಯನ್ನೇ ಕೊಟ್ಟಿದ್ದರು. ವಿದ್ಯಾರ್ಥಿಗಳಿಗೆ ರಾತ್ರಿ ಕ್ಲಾಸನ್ನು ಶಾಲೆಯಲ್ಲಿಯೇ ನಡೆಯಿಸುತ್ತಿದ್ದರು. ಶ್ರೀ ಬಳ್ಳೂರು ಗುರು ಗಳವರು ರಾಷ್ಟ್ರೀಯ ಮನೋಭಾವನೆಯವರಿದ್ದು ಮಕ್ಕಳಿಗೆ ರಾಷ್ಟ್ರಾಭಿ ವನ್ನು ತುಂಬುವದರಲ್ಲಿ ಮತ್ತು ಆ ಕಾಲಕ್ಕೆ ನಡೆಯತ್ತಿದ್ದ ರಾಷ್ಟ್ರೀಯ ಚಳು ವಳಿ ಮತ್ತು ಹಿಂದೆ ನಡೆದ ಸ್ವಾತಂತ್ರ್ಯ ಹೋರಾಟಗಳಾದ ನರಗುಂದ ಬಂಡಾಯ, ವೀರರಾಣಿ ಕಿತ್ತೂರ ಚೆನ್ನಮ್ಮನ ಕಥೆ, ಜಾಲಿಯನ್‌ವಾಲಾಬಾಗ ಹತ್ಯಾ ಕಾಂಡ ಮೊದಲಾದ ವೀರ ಚರಿತೆಗಳನ್ನು ಹೇಳುತ್ತಿದ್ದರು.

ಮೊದಲನೆ ಶಿಕ್ಷೆ

ಇಂಥಹ ವಾತಾವರಣದಲ್ಲಿ ದಿ॥ ತಿಮ್ಮನಗೌಡರು ವಿದ್ಯಾಭ್ಯಾಸ ಮಾಡು ತ್ತಿರುವಾಗ ೧೯೩೨ರಲ್ಲಿಯ ಕಾಯಿದೆಭಂಗ ಚಳವಳಿ ಬಂದಿತು. ಆ ಕಾಲಕ್ಕೆ ಒಂದು ದಿನ ಶಾಲಾ ಮಕ್ಕಳೊಂದಿಗೆ ಶಾಲೆಯಲ್ಲಿಯೇ ತಂಗಿದ್ದ ದಿ॥ ತಿಮ್ಮನ

ಗೌಡರು ತನ್ನ ಗೆಳೆಯ ಶ್ರೀ ತುಳುಜಪ್ಪಾ ಬಸಪ್ಪಾ ಸಂಣಬೊಮ್ಮಜಿ ಎಂಬ ವಿದ್ಯಾರ್ಥಿಯೊಂದಿಗೆ ರಾತ್ರೋ ರಾತ್ರಿಯೇ ಯಾರಿಗೂ ಹೇಳದೆ ಕೇಳದೆ ಹೊರಟು ಹಿರೇಕೇರೂರ ತಾಲ್ಲೂಕದಲ್ಲಿ ಹಾರೀ ಕಟ್ಟಿ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದರಲ್ಲಿ ಶ್ರೀ ತುಳುಜಪ್ಪ ಚಿಕ್ಕಬಾಲಕನೆಂದು ಅಮಾನುಷ ಘಟಕಿ ಶಿಕ್ಷೆಯನ್ನು ಇತ್ತು ಬಿಟ್ಟರು. ದಿ॥ ತಿಮ್ಮನಗೌಡರಿಗೆ ಎರಡು ವರ್ಷ ಕಠಿಣ ಶಿಕ್ಷೆ ಮತ್ತು ಐವತ್ತು ರೂಪಾಯಿ ದಂಡ; ದಂಡ ಕೊಡದಿದ್ದರೆ ಪುನಃ ಮೂರು ತಿಂಗಳ ಜೈಲು ವಾಸ, ಈ ಪ್ರಕಾರ ವಿಧಿಸಲಾಯಿತು.

ಹಾರೀಕಟ್ಟಿಯ ಅರಣ್ಯವು ನಾಗವಂದ ಹತ್ತಿರವಿದ್ದ ಬೇಚರಾಖಿ ಗ್ರಾಮಕ್ಕೆ ಸೇರಿದ್ದಾಗಿದೆ. ಈ ಸತ್ಯಾಗ್ರಹದಲ್ಲಿ ಶ್ರೀಗಳಾದ ಬಸವರಾಜ ಜ್ಯೋತಿ ನಾಗವಂದ, ಭರಮಪ್ಪ ಪೂಜಾರ, ಸಿದ್ಧಲಿಂಗಸ್ವಾಮಿ ಕಜ್ಜರಿ ಹಿರೇಮಠ ಡಾ॥ ಹೇಮಣ್ಣ ಆಂಗಡಿ ಮೊದಲಾದವರು ಭಾಗವಹಿಸಿದ್ದರು.

ಕಾರಾಗೃಹವಾಸ

ಆ ಕಾಲಕ್ಕೆ ಸರಕಾರವು ರಾಷ್ಟ್ರೀಯ ಕೈದಿಗಳನ್ನು ಬಹಳೇ- ಕ್ರೂರವಾಗಿ ನಡೆಯಿಸಿಕೊಳ್ಳುತ್ತಿದ್ದುದು ಸರ್ವವಿದಿತ. ಇವರು ಕಾರಾವಾಸದಲ್ಲಿ ಪ್ರತಿ ದಿನ ಐದಾರು ಪಡಿ ಜೋಳವನ್ನು ಬೀಸ ಬೇಕಾಗುತ್ತಿತ್ತು. ಅಸಹ್ಯವಾದ ಕ್ರೂರ ಶಿಕ್ಷೆಯನ್ನು ಅನುಭವಿಸಿದರೂ ಜೊತೆಯಲ್ಲಿಯೇ ಹಿಂದೀ ಶಿಕ್ಷಣವನ್ನೂ ಮಾಡಿದರು. ಮತ್ತು ರಾಷ್ಟ್ರೀಯ ಮುಖಂಡರ ಸಹವಾಸದಿಂದ ಉಜ್ವಲ ರಾಷ್ಟ್ರಭಕ್ತರಾದರು; ಇಂಥಹ ಪರಿಸರದಿಂದ ತಮ್ಮ ಶಿಕ್ಷೆಯನ್ನು ಪೂರೈಸಿ ಬಿಡುಗಡೆಯಾಗಿ ಬಂದರು. ಕಟ್ಟಾ ದೇಶಾಭಿಮಾನದ ಕೆಚ್ಚಾಗಿ ಹೊರಬಂದ ಅವರು ಸದಾ ಕಾಂಗ್ರೆಸ್ ಅಭಿಮಾನಿಗಳಾಗಿ ಸಾರ್ವಜನಿಕ ಸೇವೆಯಲ್ಲಿ ನಿರತರಾದರು.

ಸಾಮಾಜಿಕ ಜೀವನ

ದಿ॥ ತಿಮ್ಮನಗೌಡರು ತಮ್ಮ ಜೀವನದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ರಾಷ್ಟ್ರೀಯತೆಯನ್ನು ಅಳವಡಿಸಿಕೊಂಡರು. ಆ ಕಾಲಕ್ಕೆ ರಾಷ್ಟ್ರಪಿತಾ ಮಹಾತ್ಮಾಜಿಯವರು ಅಸ್ಪೃಶ್ಯತಾ ನಿವಾರಣೆಯ ಕರೆಕೊಟ್ಟರು. ಅದರಂತೆ ತಮ್ಮ ಮನೆಯಲ್ಲಿ ಚಾಕರಿಗೆ ಹರಿಜನರನ್ನೇ ಇಟ್ಟುಕೊಂಡರು ಮತ್ತು ಈ ಭಾಗದಲ್ಲಿ ಹರಿ

ಜನರಿಗೆ ಸಮಾನಹಕ್ಕು ಕೊಡುವ ಬಗ್ಗೆ ಪ್ರಚಾರ ಕೈಕೊಂಡರು. ಸಾರ್ವಜನಿಕ ಭಾವಿಗಳಲ್ಲಿ ಹರಿಜನರಿಗೆ ನೀರು ತುಂಬಲು ಅನುಕೂಲತೆಗಳನ್ನು ಮಾಡಿ ಕೊಟ್ಟರು. ಪ್ರತಿದಿನ ನೂಲುವರು; ತಾವು ನೂತ ನೂಲಿನಿಂದಲೆ ಅರಿವೆ ತಯಾರಿಸಿ ತೊಡುವದು, ಬಡಬಗ್ಗರ ಕಷ್ಟಗಳಲ್ಲಿ ನೆರವಾಗುವದು ಮೊದಲಾದ ಯಾವದೇ ಸಾರ್ವಜನಿಕ ಕಾರ್ಯದಲ್ಲಿ ದಿ॥ ತಿಮ್ಮನಗೌಡರು ಇದ್ದೇ ಇರಬೇಕು.

ಇವರು ಸಾಂಘಿಕ ಜೀವಿಯಾಗಿದ್ದು ತಮ್ಮ ಹಳ್ಳಿಯಲ್ಲಿ ಬೈಲಾಟದ ಮೇಳ ಕಟ್ಟಿದರು. ಅದರಲ್ಲಿ ಇವರು ಅನೇಕ ಪಾತ್ರಗಳನ್ನೂ ಸಹ ಮಾಡುತ್ತಿದ್ದರು. ಈ ಪಾತ್ರಾಭಿನಯವು ಅವರ ಅಜ್ಞಾತ ವಾಸದಲ್ಲಿ ಅನೇಕಾನೇಕ ಬಗೆಯ ವೇಷಗಳನ್ನು ಧರಿಸಿ ಪೋಲೀಸರ ಕಂಣಿಗೆ ಮಂಣೆರಚಿ ಪಾರಾಗಲು ನೆರವಾಯಿತು.

ದತ್ತಕ ಪ್ರಕರಣ

ಮೆಣಶಿನಾಳ ಗ್ರಾಮದಲ್ಲಿ ಶಿರಿವಂತ ಜಮಿನದಾರ ಮನೆತನವಾದ ಹಾಲಪ್ಪಗೌಡರ ಮನೆತನ ಒಂದಿತ್ತು. ಈ ಮನೆತದದಲ್ಲಿ ಶ್ರೀ ಹಾಲಪ್ಪಗೌಡರು ಶಿವಾಧೀನರಾಗಿದ್ದರು. ಅವರಿಗೆ ಶ್ರೀ ಬಸನಗೌಡ ಎಂಬ ಒಬ್ಬನೇ ಮಗನಿದ್ದನು. ಆತನು ಕೂಡಾ ಪ್ರಾಯಕ್ಕೆ ಬಂದಾಗ ಶಿವಾಧೀನನಾದನು. ಈ ಮನೆತನಕ್ಕೆ ಗಂಡು ಮಕ್ಕಳಿಲ್ಲದಾಯಿತು. ಆ ವೇಳೆಗೆ ತಮ್ಮ ಮನೆಯ ಎದುರಿಗೇನೇ ಸಕಲ ಗುಣ ಸಂಪನ್ನನಾಗಿ ಉಜ್ವಲ ರಾಷ್ಟ್ರ ಭಕ್ತನಾಗಿ ಬಡವರ ಬಂಧುವಾಗಿ ಬೆಳಗುತ್ತಿರುವ ತಾರೆಯಾದ ಶ್ರೀ ತಿಮ್ಮನಗೌಡರು, ಶ್ರೀ ಹಾಲಪ್ಪಗೌಡರ ಧರ್ಮ ಪತ್ನಿಯವರಾದ ಶ್ರೀಮತಿ ಹಾಲಮ್ಮ ನವರನ್ನು ಆಕರ್ಷಿಸಿದರು. ಶ್ರೀಮತಿ ಹಾಲಮ್ಮನವರು ತನ್ನ ಮನೆತನದ ಕೀರ್ತಿ ಗೌರವಗಳಿಗೆ ಶ್ರೀ ತಿಮ್ಮನಗೌಡರೇ ಯೋಗ್ಯರೆಂದು ಆಯ್ಕೆಮಾಡಿ ೧೯೩೬ ರಲ್ಲಿ ಅವರನ್ನು ದತ್ತಕ ಮಗನನ್ನಾಗಿ ಮಾಡಿಕೊಂಡರು. ಇದರಿಂದ ಶ್ರೀ ತಿಮ್ಮನಗೌಡರು ಒಂದು ಶಿರಿವಂತಿಕೆಯ ಮನೆತನದ ಒಡೆಯರಾದರು. ಈ ಸಂಪತ್ತಿನಿಂದ ಅವರು ಹಿಗ್ಗದೆ ಮೊದಲಿನಂತೆಯೇ ಸರಳ ಜೀವಿಯಾಗಿ ಸಂಪತ್ತಿನ ಉಪಯೋಗವನ್ನು ಬಡವರ, ದೀನ ದಲಿತರ ಉದ್ಧಾರಕ್ಕೆ ಉಪಯೋಗಿಸಿ ಬಡವರ ಬಂಧುವಾಗಿ ಉಜ್ವಲ ರಾಷ್ಟ್ರ ಭಕ್ತರಾಗಿ ಜೀವನ ನಡೆಯಿಸುತ್ತಿದ್ದರು.

ದಿ॥ ತಿಮ್ಮನಗೌಡರ ವಿವಾಹವು ೧೯೩೨ ರಲ್ಲಿ ಆಡಂಬರವಿಲ್ಲದೆ ಸರಳ ರೀತಿಯಲ್ಲಿ ಆಣಜಿಗ್ರಾಮದ ರೈತ ಕುಟುಂಬದ ಸಂಗವ್ವಾ ಎಂಬ ಕನ್ನೆಯೊಡನೆ ನೆರವೇರಿತು. ಇವರು ತಮ್ಮ ವೈವಾಹಿಕ ಜೀವನದಲ್ಲಿ ರಾಷ್ಟ್ರ ಕಾರ್ಯವನ್ನು ಮರೆಯದೆ ಪ್ರತಿ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಇವರು ೧೯೩೮ ರಲ್ಲಿ ಪ್ರಾಂತೀಕ ಕಾಂಗ್ರೆಸ್ ಕಮಿಟಿ ಸದಸ್ಯರಾಗಿ ಆಯ್ಕೆಯಾದರು. ಅನೇಕ ವರ್ಷ ತಾಲ್ಲೂಕು ಕಾಂಗ್ರೆಸ್ ಕಮೀಟಿಯ ಸದಸ್ಯರಾಗಿ ಕಾರ್ಯ ಮಾಡಿದರು. ಅಂದಿನ ತಾಲ್ಲೂಕಿನ ಕಾಂಗ್ರೆಸ್ ಮುಖಂಡರಾಗಿದ್ದ ಸಿದ್ದಪ್ಪ ಹುಂಬಿ, ಸಿದ್ದಲಿಂಗಯ್ಯ ಸ್ವಾಮಿ, ಕಜ್ಜರಿ ಹಿರೇಮಠ, ಹೇಮಣ್ಣ ಆಂಗಡಿ, ಸದಾಶಿವಪ್ಪ ಗುರಪ್ಪನವರ, ಮಹಾರುದ್ರಪ್ಪ ಉದಗಟ್ಟಿ, ಕೆ.ಎಫ್. ಪಾಟೀಲರೇ ಮೊದಲಾದವರೊಡನೆ ನಿಕಟ ಸಂಬಂಧವಿರಿಸಿಕೊಂಡು ಭಾರತದ ಬಂಧ ವಿಮೋಚನೆಯ ಕಾರ್ಯದಲ್ಲಿ ತನು ಮನ ಧನದಿಂದ ಅವಿಶ್ರಾಂತವಾಗಿ ದುಡಿದರು.

ಬ್ರಿಟಶರೇ ಭಾರತ ಬಿಟ್ಟು ತೊಲಗಿರಿ

೧೯೪೨ನೇ ಇಸ್ವಿಯ ಆಗಷ್ಟ ತಿಂಗಳಲ್ಲಿ ಮುಂಬಯಿಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಚಲೇಜಾವ (ಕ್ವಿಟ್ ಇಂಡಿಯಾ) ಬ್ರಿಟಿಷರೇ ಭಾರತದಿಂದ ತೊಲಗಿರಿ ಎಂಬ ಗೊತ್ತುವಳಿ ಸ್ವೀಕೃತವಾಯಿತು. ಆಗ ನಮ್ಮ ರಾಷ್ಟ್ರಪಿತ ಮಹಾತ್ಮಾಜಿಯವರು "ಮಾಡಿರಿ ಇಲ್ಲವೆ ಮಡಿಯಿರಿ" (Do or Die) ಎಂಬ ರಣ ಕಹಳೆ ಊದಿದರು. ಸ್ವಾತಂತ್ರ್ಯವು ಭಾರತೀಯರ ಹಕ್ಕು, ಇದರ ಸಂಪಾದನೆಗೆ ಬ್ರಿಟಿಶ ಸರಕಾರದ ಯಂತ್ರವನ್ನು ಮುರಿಯಲು ಚಿಕ್ಕವರು, ದೊಡ್ಡವರು, ಗಂಡು, ಹೆಂಣು ಎಂಬುದನ್ನು ಗಣಿಸಿಗೆ ತಾರದೆ ಸಕ್ರೀಯವಾಗಿ ಏನೆಲ್ಲಾ ಮಾಡುವಾ; ಇದೇ ಭಾರತೀಯರ ಕೊನೆಹೋರಾಟವಾಗಲಿ. ಈ ಕ್ರಾಂತಿ-ಯಜ್ಞದಲ್ಲಿ ಆನಂದದಿಂದ ಪ್ರಾಣಾರ್ಪಣ ಮಾಡುವಾ ಎಂದು ಕರೆಯಿತ್ತರು.

ಅಂದು ಆಗಷ್ಟ ಒಂಭತ್ತನೇ ದಿನಾಂಕ; ನಸುಕಿನಲ್ಲಿಯೇ ಮುಂಬಯಿಯಲ್ಲಿ ಸೇರಿದ ಮುಖಂಡರೆಲ್ಲರ ಬಂಧನ. ಇದರಿಂದ ಕುಪಿತಗೊಂಡ ಜನ

ಬಂಡೆದ್ದಿತು. ದಬ್ಬಾಳಿಕೆಯಿಂದ ಕ್ರಾಂತಿ ಹತ್ತಿಕ್ಕಲು ಸರಕಾರವು ಲಾಠಿ ಪ್ರಹಾರ, ಗೋಳಿಬಾರ, ನರಹತ್ಯ ನಡೆಸಿತು. ಮುಖಂಡರ ಮಾರ್ಗದರ್ಶನವಿಲ್ಲದೆ, ಈ ಕ್ರಾಂತಿ ಇಡೀ ಭಾರತವನ್ನೇ ವ್ಯಾಪಿಸಿತು. ಆಗ ಎಲ್ಲೆಲ್ಲಿಯೂ ದಬ್ಬಾಳಿಕೆ. ನಿರ್ವಿಚಾರಣೆಯಿಲ್ಲದೆ ಅನೇಕರ ಬಂಧನವಾಯಿತು. ಇದರಿಂದ ಕುಪಿತರಾದ ಜನತೆ ಕ್ರಾಂತಿಯಲ್ಲಿ ಧುಮುಕಿದರು. ಎಲ್ಲಿ ನೋಡಿದರೂ ಕ್ರಾಂತಿಯ ಕಹಳೆ ಮೊಳಗಹತ್ತಿತ್ತು. ಆಗ ತಿಮ್ಮನಗೌಡರು ಈ ಕ್ರೂರ ದಬ್ಬಾಳಿಕೆಗೆನ್ನೊಂದು ಕ್ರಾಂತಿಯಲ್ಲಿ ಧುಮುಕಿದರು. ಸರಕಾರದ ಹೇಯ ಕೃತಿಗಳ ನಿಷೇಧಾರ್ಥವಾಗಿ ಅಂದು ಬುಧವಾರ ತುಮ್ಮಿನ ಕಟ್ಟೆಯಲ್ಲಿ ನೆರೆಯತಕ್ಕ ಸಂತೆಯನ್ನು ಹರತಾಳ ಮಾಡಿ ಬಂದು ಮಾಡಿಸಿದರು. ಮತ್ತು ಕ್ರಾಂತಿಯಲ್ಲಿ ಜನರು ಸೇರುವಂತೆ ಕ್ರಾಂತಿಯ ಸಂದೇಶವನ್ನು ಆ ಭಾಗದಲ್ಲಿ ಮುಟ್ಟಿಸಲು ಕಾರ್ಯ ಪ್ರಾರಂಭಿಸಿದರು. ಮತ್ತು ಕ್ರಾಂತಿ ಸೈನ್ಯವನ್ನು ಸಂಘಟಿಸಿ, ನೇತಾರಾದರು.

ಕ್ವಿಟ್ ಇಂಡಿಯಾ ಠರಾವ ಪಾಸಾಗುವಮುನ್ನವೆ ಮುಖಂಡರ ಅನಿರೀಕ್ಷಿತ ಬಂಧನದಿಂದ ಅವರು ಕ್ರಾಂತಿಯ ಮಾರ್ಗದರ್ಶನವಿತ್ತಿರಲಿಲ್ಲ. ಇದರಿಂದ ಕಾರ್ಯಕರ್ತರು ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಯೋಚಿಸುತ್ತಿದ್ದರು. ತಿಮ್ಮನಗೌಡರಾದರೂ ಈ ಯೋಚನೆಯಲ್ಲಿರುವಾಗ ಹರತಾಳಮಾಡಿದ ಆಪಾದನೆಯ ಮೇಲೆ ಸರಕಾರವು ಇವರ ಬಂಧನಕ್ಕಾಗಿ ಪೋಲೀಸ ಪಡೆಯನ್ನು ಕಳಿಸಿತು. ಪೋಲೀಸರು ತುಮ್ಮಿನಕಟ್ಟೆಯಲ್ಲಿ ಇನರನ್ನು ಬಂಧಿಸಲು ಬಂದಾಗ ಭೀಮಾಜಿ ಎಂಬ ಹವಾಲದಾರನು ಇವರ ಕೂಡ ಅನುಚಿತ ರೀತಿಯಲ್ಲಿ ವರ್ತಿಸಿ ಇವರ ತಲೆಯ ಮೇಲಿನ ಟೊಪ್ಪಿಗೆಯನ್ನು ಕಿತ್ತಿಕೊಂಡನು. ಇದರಿಂದ ಕುಪಿತರಾದ ಪಾಟೀಲರು ಭಾರತವು ಸ್ವತಂತ್ರವಾಗುವವರೆಗೆ ತಲೆಯ ಮೇಲೆ ಟೊಪ್ಪಿಗೆ ಧರಿಸುವುದಿಲ್ಲವೆಂದು ಪ್ರತಿಜ್ಞೆ ಗೈದರು. ಇದರಿಂದ ನೊಂದವರಾದ ಪಾಟೀಲರ ಕ್ರಾಂತಿ ಸೈನಿಕರು ಹವಾಲದಾರನ ರುಮಾಲನ್ನು ಕಸಿದುಕೊಂಡು ಅಗ್ನಿ ನಾರಾಯಣನಿಗೆ ಅರ್ಪಿಸಿದರು. ಈ ಕ್ರಾಂತಿ ವೀರರೆದುರು ಪೋಲೀಸರ ಪಡೆಯು ಇವರ ಬಂಧನ ಮಾಡಲು ಅಶಕ್ತವಾಗಿ ಮರಳಿತು.

ದಿ॥ ತಿಮ್ಮನಗೌಡರು ಕ್ರಾಂತಿಕಾರ ಯೋಜನೆಗಾಗಿ ತನ್ನೆ ತಂಡದೊಡನೆ ಅಜ್ಞಾತವಾಸದಲ್ಲಿರುವಾಗ, ಶ್ರೀ ಕರಿಯಪ್ಪನವರು ಸಂಗೂರ ಇವರು ಹಾಂಸ

ಭಾವಿಯ ಹಾಯಸ್ಕೂಲ ಮಕ್ಕಳೊಂದಿಗೆ ಕ್ರಾಂತಿಯ ಕಹಳೆ ಊದುತ್ತಾ ಜನರನ್ನು ಎಚ್ಚರಿಸುತ್ತಾ ತುಮ್ಮನಕಟ್ಟಿಗೆ ಬಂದರು. ದಿ॥ ತಿಮ್ಮನಗೌಡರು ಮತ್ತು ಶ್ರೀ ಕರಿಯಪ್ಪನವರು ಗಾಳಿ ಬೆಂಕಿಗಳ ಸಂಯೋಗವಾದಂತಾಗಿ ಅಂದು ತುಮ್ಮಿನಕಟ್ಟಿಯಲ್ಲಿ ಪ್ರಚಂಡ ಸಭೆ ಸೇರಿಸಿ ಜನತೆಯನ್ನು ಎಚ್ಚರಿಸಿದರು ಮತ್ತು ರಾಷ್ಟ್ರಕ್ಕಾಗಿ "ನೂಡು ಮಡಿ" ಎಂಬ ಧೀರ ಪ್ರತಿಜ್ಞೆಯನ್ನು ಮಾಡಿ ಹೊರಟರು.

ಶ್ರೀ ಕರಿಯಪ್ಪನವರು ಮತ್ತು ತಿಮ್ಮನಗೌಡರು ತಮ್ಮ ಕ್ರಾಂತಿಕಾರ ಸೈನಿಕರೊಂದಿಗೆ ಮೆಣಸಿನಾಳ ಗ್ರಾಮಕ್ಕೆ ಹೋದರು. ಅಲ್ಲಿ ಮಾತೆಹಾಲ ಮ್ಮನವರ ಪಾದಕ್ಕೆರಗಿ ಆಶೀರ್ವಾದ ಪಡೆದರು. ಮೂರು ವರ್ಷದ ಮಗು ಬಸನಗೌಡ, ಒಂದು ವರ್ಷದ ಮಾದೇವಕ್ಕ ಇವರನ್ನು ಎತ್ತಿ ಮುದ್ದಿಸಿ ಆಶೀರ್ವಾದ ಮಾಡಿದರು. ಹೆಂಡತಿ ಸಂಗವ್ವನು ರಣತಿಲಕವನ್ನಿಕ್ಕಿ ಆರತಿ ಎತ್ತಿ ಬೀಳ್ಕೊಟ್ಟರು.

ದಿ॥ ತಿಮ್ಮನಗೌಡರು ಮನೆಯಿಂದ ಹೊರ ಬೀಳುವ ಮುನ್ನ ತನ್ನಲ್ಲಿದ್ದ ಳಂ ಸಾವಿರ ರೂ. ಗಳ ಸಾಲ ಪತ್ರಗಳನ್ನು ತೆಗೆದು, ಸಾಲಗಾರರನ್ನು ಕರೆಸಿ ಅವರೆದುರು ಅವನ್ನೆಲ್ಲ ಹರಿದು ಹಾಕಿದರು. ಅಡವು ಇಕ್ಕಿದ್ದ ಚಿನ್ನ, ದಾಗೀನೆಗಳನ್ನೆಲ್ಲ ಅವರವರಿಗೆ ತಿರುಗಿಕೊಟ್ಟರು. "ನೀವಿನ್ನು ಸಾಲಗಾರರಲ್ಲ ಸ್ವತಂತ್ರರು, ಹೋಗಿರಿ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿರಿ" ಎಂದು ಆಶೀರ್ವದಿಸಿ ಕಳಿಸಿದರು. ಈ ಘಟನೆ ಸತ್ತಲು ಹಬ್ಬಿ ಜನತೆ ತಿಮ್ಮನಗೌಡರನ್ನು ಅತ್ಯಂತ ಗೌರವ ಅಭಿಮಾನಗಳಿಂದ ಕಾಣ ಹತ್ತಿದರು.

ಈ ಸ್ವಾತಂತ್ರ್ಯ ಯೋಧರಲ್ಲಿ ಶ್ರೀ ಪಾಟೀಲ ತಿಮ್ಮನಗೌಡರು ಸೇನಾಪತಿಯಾಗಿಯೂ, ಮತ್ತು ಇವರ ದಳದಲ್ಲಿ ಶ್ರೀ ಶಿವಪ್ಪನವರು ನೆಸ್ವಿ ಶ್ರೀ ತಿರಕಪ್ಪ ಹುಯ್ಯಪ್ಪನವರ, ಶ್ರೀ ವೀರಪ್ಪಾ ಹಂಚಿನಮನಿ, ಶ್ರೀ ರಾಜೋಟಪ್ಪ ಚನ್ನಪ್ಪಾ ಹಾವೇರಿ, ವೆಂಕಪ್ಪ ದೊಡ್ಡಮನೆ, ಲಕ್ಷ್ಮಣ ವಡೇರ ಹಳ್ಳಿ ಶ್ರೀ ವೆಂಕಪ್ಪಾ ಶೇತ್ಸನದಿ, ಶ್ರೀ ಚನ್ನಬಸಪ್ಪಾವಾಸಣದ, ಶ್ರೀ ಮಲ್ಲೇಶಪ್ಪ ಬಣಕಾರ ಚಿಕ್ಕೊಣತಿ ಶ್ರೀ ಜಯದೇವ ಚಿಕ್ಕೇರೂರ, ಶ್ರೀ ದೇಸಾಯಿ ಸೂಡಂಬಿ, ಶ್ರೀ ಕೊಡ್ಲೇರ ಬೆಟಕೇರೂರ, ಶ್ರೀ ನಜ್ಜೂರ, ಶ್ರೀ ತಿವಪ್ಪತಳವಾರ

ಮೆಣಸಿನಾಳ, ದಿ॥ ನಿಂಗನಗೌಡ ಪಾಟೀಲ ಮೆಣಸಿನಾಳ, ಶ್ರೀ ಬಾಲಪ್ಪನವರ ಮಾಸ್ತರರು, ಶ್ರೀ ಪತಿ ಅಂತರವಳ್ಳಿ, ಶ್ರೀ ವೀರಭದ್ರಪ್ಪನವರು ನ್ಯಾಮತಿ, ಮೊದ ಲಾದವರಿದ್ದರು. ಅಲ್ಲದೆ ಇವರು ಹೋದಲ್ಲೆಲ್ಲ ಸಾಕಷ್ಟು ತರುಣರ ತಂಡ ಕಾರ್ಯ ಮಾಡಲು ಮುಂದಾಗುತ್ತಿದ್ದರು. ಸ್ವಾತಂತ್ರ್ಯ ಯೋಧರಿಗೆ ಸಕಲ ರೀತಿ ಯಿಂದ ಸಹಾಯ ಮಾಡುತ್ತಿದ್ದರು.

ವಿವಿಧ ಕಾರ್ಯಕ್ರಮಗಳು

ಶ್ರೀ ವೀರಭದ್ರಪ್ಪಾ ನ್ಯಾಮತಿ ಇವರು ಪ್ರಚಾರ ಕಾರ್ಯದಲ್ಲಿ ಬುಲೆ ಟಿನ್ ಹಂಚುವದರಲ್ಲಿ ಮೊದಲಿನಿಂದ ಪಳಗಿದವರಿದ್ದು ಈ ಕಾರ್ಯವನ್ನು ಒಳ್ಳೇ ಚಾಣಾಕ್ಷತನದಿಂದ ಮಾಡುತ್ತಿದ್ದರು. ಇವರು ಕರಪತ್ರಗಳನ್ನು ತಯಾರಿಸುವ ಕೇಂದ್ರ ತುಮ್ಮಿನಕಟ್ಟಿಯ ಗ್ರಾಮಪಂಚಾಯತಿ ಕಚೇರಿಯೇ ಆಗಿತ್ತು. ಆಗಿನ ಪಂಚಾಯಿತಿ ಚೇರಮನ್ನ ದಿ॥ ರಾಮಚಂದ್ರಪ್ಪಾ ಪಾಟೀಲ. ಇವರು ಈ ಯೋಧರಿಗೆ ಸಕಲ ರೀತಿಯಿಂದ ಸಹಾಯ ಮತ್ತು ಸೂಚನೆಗಳನ್ನೀಯುತ್ತಿದ್ದರು. ಆಗಿನ ಪ್ಹಿ. ಪಿ. ಸಿ. ಸೆಕ್ರೆಟರಿಯಾಗಿದ್ದ. ಶ್ರೀ ಟಿ. ಜಿ. ಅಜಂಪುರ, ಇವರು ಕರಪತ್ರಗಳನ್ನು ತಯಾರಿಸುವಲ್ಲಿ ಮುದ್ರಣ ಯಂತ್ರವಾಗಿದ್ದರು. ಮತ್ತು ಈ ಬಗ್ಗೆ ತಹಶೀಲದಾರ ನಾಯ್ಕ ಸಾಹೇಬರಿಂದ ಮತ್ತು ಪೋಲೀಸ್ ಅಧಿಕಾರಿಗಳಿಂದ ಹೊಡೆತ ಬಡೆತಗಳನ್ನು ತಿಂದರು ಮತ್ತು ಬಂಧಿತರಾದರು. ಮತ್ತು ಯಾವದೇ ಸರಕಾರಿ ಅಧಿಕಾರಿಗಳು ಬಂದರೆ ಪಂಚಾಯತಿಯಲ್ಲಿಯೇ ತಂಗಬೇಕಾಗುತ್ತಿತ್ತು. ಇದರಿಂದ ಸರಕಾರದ ಚಲನವಲನ ಕ್ರಾಂತಿಕಾರರಿಗೆ ತೀವ್ರವೇ ತಿಳಿಯಲು ಸಹಾಯಕವಾಗಿತ್ತು.

ತಿಮ್ಮನಗೌಡರು ತಮ್ಮ ತಂಡದೊಡನೆ ರಾಣೇಬೆನ್ನೂರ, ಹಿರೇಕೇರೂರ, ಶಿಕಾರಿಪುರ, ಹೊನ್ನಾಳಿ ತಾಲ್ಲೂಕುಗಳಲ್ಲಿ ಪ್ರಚಾರ ಕಾರ್ಯಕೈಗೊಂಡು ಅಲ್ಲಿಯ ಜನತೆಯು ಸರಕಾರದ ವಿರುದ್ಧ ಬಂಡೇಳಲು ಪ್ರೇರೇಪಿಸಿದರು. ಮತ್ತು ಹರತಾಳ ವಗೈರೆಮಾಡಿಸಹತ್ತಿದರು ಇವರ ಕ್ರಾಂತಿಕಾರ ಕಾರ್ಯ ಬ್ರಿಟಿಶ ಸರ ಕಾರದ ಕಂಣನ್ನು ಕುಕ್ಕಿತು. ಇವರನ್ನು ಬಂಧಿಸಲು ಪೋಲೀಸ್ ಪಡೆಯನ್ನೇ ನಿಯಮಿಸಿತು. ಆದದಿನಿಂದ ತಿಮ್ಮನಗೌಡರು ಅಜ್ಞಾತವಾಗಿದ್ದು ಕಾರ್ಯಕ್ರಮ

ಗಳನ್ನು ರೂಪಿಸಲು ಆಗಾಗ ಬ್ಯಾಡಿಗೆ ಹೋಗಿ ಶ್ರೀ ಕೆ. ಎಫ್. ಪಾಟೀಲರನ್ನು ಕಂಡು ಅವರೊಡನೆ ಆಪ್ತಾಲೋಚನೆ ಹಾಗೂ ಕಾರ್ಯಕ್ರಮಗಳನ್ನು ನಿರ್ಧಾರ ಮಾಡಿಕೊಂಡು ಅವರ ನೇತೃತ್ವದಲ್ಲಿ ಕಾರ್ಯ ನಡೆಸುತ್ತಿದ್ದರು. ಬ್ಯಾಡಿಗಿಯಲ್ಲಿ ರಾತ್ರಿ ಉಳಿದಾಗ ಮರಿಗೆಪ್ಪಸೆಟ್ಟರ ಅಂಗಡಿ ಎದುರಿಗಿನ ಮೈಣಸಿನ ಕಾಳಿ ಅಂಡಿಗೆಗಳ ಮೇಲೆಯೇ ಅವರು ಮಲಗುತ್ತಿದ್ದರು. ಹೊದಿಯಲೂ ಹಾಸಲೂ ಹೆಗಲ ಮೇಲಿದ್ದ ಬಿಳೀ ಕಂಬಳಿಯೇ ಆಧಾರ. ಸ್ವಾರಂಭದಲ್ಲಿ ಕೈಯಲ್ಲಿ ಚಪಕೊಡಲಿ ಒಂದು ಇರುತ್ತಿತ್ತು. ಮುಂಹೆ ಅದನ್ನು ಒಗೆದು ಬಿಟ್ಟರು.

ದಿ॥ ಮಹಾದೇವ ಮೈಲಾರ ಇವರನ್ನು ತೋಟದಯಲ್ಲಾಪುರದಲ್ಲಿ ಸಂಧಿಸಿ ತಿಂಗಳಲ್ಲಿ ಎರಡು ಕಾರ್ಯಗಳನ್ನಂತೂ ಮಾಡಲೇ ಬೇಕೆಂದು ನಿರ್ಧರಿಸಿದರು. ದಿನಾಂಕ ೧೫ ಮತ್ತು ತಿಂಗಳ ಕೊನೆ ದಿನಗಳು ಮಾಡಲೇಬೇಕಾದ ಕಾರ್ಯಗಳಿಗೆಮಿಸಲು. ಉಳಿದ ದಿನಗಳಲ್ಲಿ ಅನುಕೂಲಿಸಿದಾಗ ಸರಕಾರಿ ಆಸ್ತಿಗಳ ನಾಶ, ಹಪ್ತೆಲೂಟ, ಟಪಾಲ ಅಪಹರಣ, ಪೋಲೀಸರಿಂದ ಶಸ್ತ್ರ ಅಪಹರಣ, ಮುಂತಾದ ಕಾರ್ಯಗಳನ್ನು ಯೋಜನಾಬದ್ಧದಾಗಿ ಮಾಡಲು ಕಾರ್ಯಕ್ರಮ ಹಾಕಿಕೊಂಡರು.

ಅಲ್ಲಿಂದ ಬಂದು ಇವರು ಹರತಾಳ ಪ್ರಚಾರ ಮಾಡುವಾಗ ಎಂಟು ಜನ ಸಶಸ್ತ್ರ ಪೋಲೀಸರು ಬಂದು, ಬಂಧಿಸಲು ಹೆಣಗಿದರು. ಆಗ ಮಿಂಚಿನ ವೇಗದಿಂದ ತಿಮ್ಮನಗೌಡರು ತನ್ನ ಗುಂಪಿನೊಂದಿಗೆ ಪೋಲೀಸರ ಮೇಲೆರಗಿದರು. ಘತ್ತು ಅವರ ಬಂದೂಕುಗಳನ್ನು ಕಸಿದುಕೊಂಡರು. ಇದರಿಂದ ಸರಕಾರವು ರೊಚ್ಚಿಗೆದ್ದು ಶ್ರೀ ತಿಮ್ಮನಗೌಡರನ್ನು ಹಿಡ್ತಿದುಕೊಟ್ಟವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ಕೊಡುವದಾಗಿ ಸಾರಿತು. ಮತ್ತು ಬಲವಾದ ಪೋಲೀಸ ಪಡೆಯನ್ನು ನೇಮಿಸಿ ಅವರಿಗೆ ಗುಂಡಿಕ್ಕಿಯಾದರೂ ಅವರ ಹೆಣವನ್ನು ತರಲು ಆಜ್ಞೆ ಮಾಡಿತು.

ಇದರಿಂದ ತಿಮ್ಮನಗೌಡರು ಮತ್ತಷ್ಟು ಆವೇಶದಿಂದ ನೇಪಾಂತರಹೊಂದಿ ತಮ್ಮ ಕಾರ್ಯವನ್ನು ತೀವ್ರಗತಿಯಿಂದ ಸಾಗಿಸಹತ್ತಿದರು. ಮತ್ತು ಮಾರಕಾಸ್ತ್ರಗಳ ಸಂಗ್ರಹವನ್ನು ಹೆಚ್ಚಿಸಿದರು. ಗುಡ್ಡದ ಮಾದಾಪೂರ ಅರಣ

ರಕ್ಷಕನ ಆಫೀಸ ಮೇಲೆ ದಾಳಿ ಮಾಡಿ ಬಂದೂಕು ಕಸಿದುಕೊಂಡು ಕಚೇರಿಯನ್ನು ಅಗ್ನಿ ನಾರಾಯಣನಿಗೆ ಅರ್ಪಿಸಿದರು.

ತಂಗಲು ಯೋಗ್ಯ ಸ್ಥಳಗಳನ್ನು ಆಯ್ಕೆ ಮಾಡುತ್ತಾ ಗುಡ್ಡದಮಲ್ಲಾಪುರ ಮಠಕ್ಕೆ ಬಂದರು. ಸ್ವಾಮಿಗಳವರ ಆಶೀರ್ವಾದ ಪಡೆದರು. ಅದರಂತೆ ಮಠದ ಗುರುಗಳವರು ಇವರಿಗೆ ತೀರ್ಥ ಪ್ರಸಾದಗಳನ್ನು ಸದಾವಕಾಲಕೊಡಲು ಒಪ್ಪಿದರು. ಶ್ರೀಗಳ ಮಠವು ಕ್ರಾಂತೀಕಾರರ ವಾಸಸ್ಥಾನವಾಯಿತು.

ಸಮೀಪದ ಸೂಡಂಬಿ ರಾಷ್ಟ್ರೀಯ ಚಳವಳಿಯ ಆಗರವಾಗಿತ್ತು ಅಲ್ಲಿದ್ದ ಇವರ ಅನೇಕ ಆಪ್ತಿಷ್ಟರು ಇವರಿಗೆ ನೆರವಾಗುತ್ತಿದ್ದರು.

ಮೊದಲೆ ಮುಖಂಡರಿಂದ ಸಿದ್ಧ ಮಾಡಲ್ಪಟ್ಟ ಕಾರ್ಯಕ್ರಮಕ್ಕನುಗುಣವಾಗಿ ೧೫ನೇ ಸಪ್ಟಂಬರ ೧೯೪೨ ರಂದು ಬ್ಯಾಡಗಿ ಸ್ಟೇಶನ್ ಸುಡುವ ಕಾರ್ಯಕ್ರಮ ಸಿದ್ಧ ಮಾಡಿಕೊಂಡರು. ಸುಣಕಲ್ ಬಿದ್ರಿಗೆ ಎಲ್ಲ ಕ್ರಾಂತಿಕಾರರು ಅಂದು ಮಿಲಿತವಾದರು. ಶ್ರೀರಾಮಚಂದ್ರನಿಗೆ ಶಬರಿಯು ಉಪಚರಿಸಿದಂತೆ ವೀರ ಮಾತೆಯಾದ ಬಸಮ್ಮನವರು ಕುಸಗೂರು, ಎಲ್ಲ ಮಕ್ಕಳಿಗೂ ಯೋಗ್ಯ ಉಪಚಾರಮಾಡಿ ಆಶೀರ್ವದಿಸಿ ಕಳಿಸಿದರು. ಅವಶ್ಯವೆನಿಸಿದಾಗಲೆಲ್ಲ ಬರಲು ತಿಳಿಸಿದರು ಮತ್ತು ಈ ಪ್ರಕಾರ ಶರಣೆ ಬಸಮ್ಮನವರ ಮನೆ ಕ್ರಾಂತಿಕಾರರ ಬೀಡಾಯಿತು. ಅಂದು (೧೫-೯-೪೨) ವೀರಮಾತೆಯಿಂದ ಆಶೀರ್ವಾದ ಪಡೆದು ಕಾಕೋಳಕ್ಕೆ ಬಂದರು. ಕಾಕೋಳದಲ್ಲಿ ಸಂಗೂರ ಕರಿಯಪ್ಪನವರ ಗುಂಪಿನೊಡನೆ ಕೂಡಿಕೊಂಡು ಬ್ಯಾಡಿಗಿ ಸ್ಟೇಶನ್ನಿನ ಮೇಲೆ ಹಲ್ಲೆ ಮಾಡಲು ಹೊರಟರು. ಇದರಲ್ಲಿ ದಿ॥ ವೆಂಕಪ್ಪಾ ತೀಪ್ಪನದಿ ಇವನು ಸಂಗೊಳ್ಳಿ ರಾಯಣ್ಣನನ್ನು ನೆನಪಿಗೆ ತರುವಂತೆ ಕಾರ್ಯಮಾಡಿದನು. ಮಾರವಾಡಿ ವೇಷಧರಿಸಿ ಹಿಂದಿಯಲ್ಲಿ ಸ್ಟೇಶನ್ ಮಾಸ್ತರರ ಕೂಡ ಮಾತನಾಡುತ್ತ ಅವರ ಮೇಲೆರಗಿ ಅವರನ್ನು ಬಂಧಿಸಿದನು. ಸೂಚನೆ ಪ್ರಕಾರ ಅಲ್ಲಿದ್ದ ಹಣ ಅಪಹಾರ ಮಾಡಿ ಸ್ಟೇಶನಕ್ಕೆ ಬೆಂಕಿಯನ್ನಿಕ್ಕಿ ರಾತ್ರೋರಾತ್ರಿ ಕಡೂರ ಗ್ರಾಮಕ್ಕೆ ಬಂದು, ಶ್ರೀ ಬಸವಂಣೆಪ್ಪಾ ತುಮ್ಮಿನಕಟ್ಟೆಅವರಲ್ಲಿ ತಂಗಿದರು.

ಅಂದು ೧೯೪೨ನೇ ಅಕ್ಟೋಬರ ೨ನೇ ದಿನಾಂಕ ರಾಷ್ಟ್ರಪಿತನ ಜನ್ಮದಿನ; ತುಮ್ಮಿನಕಟ್ಟೆ ಗ್ರಾಮದಲ್ಲಿ ಬೆಳಗಿನ ಆರು ಘಂಟೆಗೆ ನಗರಸಂಕೀರ್ತನೆ ಹೊರಟು ಬೀದಿ ಬೀದಿ ಸುತ್ತಿ ಶ್ರೀ ಬಸವೇಶ್ವರ ದೇವಸ್ಥಾನದೆದುರು ಧ್ವಜ ವಂದನೆಯು ಶ್ರೀ ಶಿದ್ರಾಮಪ್ಪ ಅಜಂಪುರ ಇವರ ಹಸ್ತದಿಂದ ನೆರವೇರಿತು. ಈ ಕಾರ್ಯಕ್ರಮದಲ್ಲಿ ಬಸಪ್ಪ ಅಜಂಪುರ ವೇ। ಚನ್ನವೀರಯ್ಯ ಆಲದಗೇರಿ ವೇ। ದೊಡ್ಡಯ್ಯನವರು ಮಠದ ಶ್ರೀ ರಾಮಚಂದಪ್ಪಾ ಶೆಟ್ರು ಮುಂತಾದ ಊರ ಪ್ರಮುಖರು ಮಾತನಾಡಿ, ಮಧ್ಯಾನ್ಹ ೨ ಘಂಟೆಗೆ ಮಹಾತ್ಮಾಜಿಯವರ ಭಾವ ಚಿತ್ರ ಮೆರವಣಿಗೆಯ ಪ್ರೋಗ್ರಾಂ ಮಾಡಿದರು. ಶಿಂಗರಿಸಿದ ಫೋಟೋ ವಗೈರೆ ಝೋಂಡಾಕಟ್ಟೆಯ ಮೇಲಿರಿಸಿ ಮಧ್ಯಾನ್ಹದ ಉತ್ಸವದ ತಯಾರಿಯಲ್ಲಿದ್ದರು. ಮಧ್ಯಾನ್ಹ ೧೨.೩೦ರ ವೇಳೆಗೆ ೨೫-೩೦ ಸಶಸ್ತ್ರ ಪೋಲೀಸರು ಶ್ರೀ ಎಲ್.ಆರ್. ಚಂದರಗಿಯವರನ್ನೊಳಗೊಂಡು ಮೂರು ಜನ ಪೋಲೀಸ್ ಸಬ್‌ಇನಸ್ಪೇಕ್ಟರರು ಬಂದು ಮೆರವಣಿಗೆಯಾಗದಂತೆ ಅಲ್ಲಿ ಕಾವಲು ಮಾಡ ಹತ್ತಿದರು. ಇಂದಿನ ಉತ್ಸವವು ಅಭೂತ ಪೂರ್ವವಾಗಿದ್ದು ಪೋಲೀಸರ ಮತ್ತು ತಿಮ್ಮನ ಗೌಡರ ನಡುವೆ ಲಢಾಯಿ ನಡೆಯುವದೆಂಬ ವದಂತಿ ಸುತ್ತಲಿನ ಹಳ್ಳಿಗಳಲ್ಲಿ ಹಬ್ಬಿ, ಹಳ್ಳಿ ಪಳ್ಳಿಗಳಿಂದ ಸಾವಿರಾರು ಜನರು ಬಂದಿದ್ದರು. ಇಲ್ಲಿ ಬಂದವರನ್ನು ಗುಂಡಿಕ್ಕುವದಾಗಿ ಪೋಲೀಸರು ಸಾರಿದರು. ಜನವೇನೋ ವಿಳಿತಗೊಂಡಿತ್ತು. ಆದರೆ ಸಶಸ್ತ್ರ ಪೋಲೀಸರೊಂದಿಗೆ ಹೋರಾಡುವದು ಕಷ್ಟವೆನಿಸಿತು. ಜನ ಸ್ತೋಮವು ಅಲ್ಲಲ್ಲಿ ನೋವನ್ನು ತಿನ್ನುತ್ತಿರುವ ವೇಳೆಗೆ ತುಮ್ಮಿನಕಟ್ಟೆ ಗ್ರಾಮದ ಹಂಪಾಳಿಯವರ ಮನೆಯ ಸೊಸೆಯಾದ ಶ್ರೀಮತಿ ಗದಿಗಮ್ಮ ಬಸಪ್ಪಹಂಪಾಳಿ ಎಂಬ ವೀರ ಮಹಿಳೆ ತನ್ನ ಇಬ್ಬರು ಹೆಂಣುಮಕ್ಕಳು ಗೌರಮ್ಮ, ಲಲಿತಾ, ಸ್ತ್ರೀಮತ್ತು ಬಿ.ಎ. ಮುಂತಾದ ನಾಟಕಗಳನ್ನು ಬರೆದು ಪ್ರಸಿದ್ಧರಾದ ಕೋಲ ಶಾಂತಪ್ಪ ಐರಣಿಯವರ ಮಕ್ಕಳಾದ ಲಲಿತಾ, ಕೊಟ್ರಮ್ಮ ಮತ್ತು ಶ್ರೀರಾಮ ಚಂದ್ರಪ್ಪಾ ಶೆಟ್ರು ಇವರ ಮಕ್ಕಳಾದ ಸಾವಿತ್ರಮ್ಮ (ಈ ಮಕ್ಕಳೆಲ್ಲ ೮-೧೦ ವರ್ಷ ವಯಸ್ಸಿನವರು) ಇವರನ್ನು ಕೂಡಿಕೊಂಡು ಕೈಯಲ್ಲಿ ಧ್ವಜ ಹಿಡಿದು ವೀರ ಗೀತೆಗಳನ್ನು ಹಾಡುತ್ತಾ ಜನಸಂದಣಿಯಿಂದ ಹಾಯ್ದು ಪೋಲೀಸರ ಪಹರೆಯನ್ನು ನುಗ್ಗಿ ಝೋಂಡಾ ಕಟ್ಟೆಗೆ ಧಾವಿಸಿ ಅಲ್ಲಿದ್ದ ಭಾರತಮಾತೆ ಮತ್ತು ಮಹಾತ್ಮಾಜಿಯವರ ಫೋಟೋಗಳನ್ನು ಎತ್ತಿಕೊಂಡು ಜಯಕಾರ ಮಾಡಿದರು.

ಹೆಂಣು ಮಕ್ಕಳ ಈ ವೀರಕೃತಿಯು ಸೇರಿದ ೩-೪ ಸಾವಿರ ಜನತೆಯ ಮೇಲೆ ವರ್ಣನಾತೀತ, ಉತ್ಸಾಹ ತುಂಬಿತು. ಆಗ ಜನತೆಯು ಝೋಂಡಾ ಕಟ್ಟಿಯ ಕಡೆ ನುಗ್ಗಿತು. ಮುಂದಾಗುವ ವಿಪರೀತ ಪರಿಸ್ಥಿತಿಯ ಬಗ್ಗೆ ತಡೆಯುಂಟಾಗಲೆಂದು ಶ್ರೀ ಚಂದರಗಿ ಫೌಜದಾರರು "ನಾವೂ ಭಾರತೀಯರೆ" ನಮಗೂ ಸ್ವತಂತ್ರ ಭಾರತದ ಪ್ರಜೆಯಾಗಬೇಕೆಂಬ ಹಂಬಲವಿದೆ; ಆದರೆ ನಮ್ಮ ದೇಹವು ಖಾಕಿ ಅರಿವೆಯನ್ನು ಸುತ್ತಿಕೊಂಡಿದೆ; ಜನರೆಲ್ಲ ಶಾಂತ ರೀತಿಯಿಂದ ಉತ್ಸವಮಾಡಿರಿ; ನಾವೂ ನಮ್ಮ ಪೋಲೀಸ್ ಪಡೆಯೊಂದಿಗೆ ಉತ್ಸವದಲ್ಲಿ ಪಾಲ್ಗೊಳ್ಳುವೆವು; ವಿಧ್ವಂಶಕ ಕೃತಿಗಳನ್ನು ಮಾಡಬೇಡಿರಿ" ಎಂದು ಕೇಳಿಕೊಂಡರು. ಶ್ರೀ ಚಂದರಗಿ ಫೌಜದಾರರಿಗೆ ಆ ಕಾಲಕ್ಕೆ ಒಂದು ಕಾಲು ನೋವಾಗಿ ಓಡಾಡಲು ಕಷ್ಟವಿತ್ತು. ಅಂತಹದರಲ್ಲಿಯೇ ಉತ್ಸವದಲ್ಲಿ ತಮ್ಮ ಪೋಲಿಸ ಪಡೆಯೊಂದಿಗೆ ಭಾಗವಹಿಸಿದರು. ಎಲ್ಲ ಪೋಲೀಸರು ಕುಂಕುಮ ತಿಲಕದಿಂದ ಶೋಭಿಸುತ್ತಿದ್ದರು ಫೌಜದಾರರ ಜಾಣತನದ ಈ ಕಾರ್ಯದಿಂದ ಅಂದಿನ ಉತ್ಸವಕ್ಕೆ ಬಹಳೇ ಮೆರುಗು ಉಂಟಾಗಿತ್ತು; ಎರಡು ಫರ್ಲಾಂಗ ಉದ್ದ ಮತ್ತು ವಿಶಾಲವಾದ ಬೀದಿಯಲ್ಲಿ ಒಂದು ಸೂಜಿ ಜಲ್ಲಿದರೂ ನೆಲ ಕಾಣದಂತಾಯಿತು. ಅಂತಹ ಉತ್ಸವವನ್ನು ತುಮ್ಮಿನಕಟ್ಟಿ ಗ್ರಾಮವು ಎಂದೂ ಕಾಣದು. ಜನತೆಯು ಇಷ್ಟೊಂದು ರಾಷ್ಟ್ರ ಸ್ರೇಮಿಗಳಾಗುವದಕ್ಕೆ ಹುತಾತ್ಮಾ ತಿಮ್ಮನಗೌಡರ ಕಾರ್ಯವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ; ಇದರಿಂದ ಪುಲುಕಿತರಾದ ಹಳ್ಳಿಪಳ್ಳಿಗಳ ಜನರು ರಾಷ್ಟ್ರ ಸ್ರೇಮಿಗಳಾದರು ಮತ್ತು ಕ್ರಾಂತಿಕಾರ ವೀರರಿಗೆ ಎಲ್ಲಾ ಕಾರ್ಯದಲ್ಲಿ ತುಂಬಾ ನೆರವನ್ನೀಯ ಹತ್ತಿದಗು. ಇದರಿಂದ ಸರಕಾರವು ಮತ್ತಿಷ್ಟು ರೊಚ್ಚಿಗೆದ್ದು ಈ ಭಾಗದ ಜನತೆಯನ್ನು ಹಂಣುಮಾಡಲು ಮತ್ತು ಶ್ರೀ ತಿಮ್ಮನಗೌಡರ ಗುಂಪನ್ನು ಹಿಡಿಯಲು ಮಿಲಿಟರಿ ಸಹಾಯ ಕೋರಿತು.

ಅಂದು ಬುಧವಾರ ತುಮ್ಮಿಕಟ್ಟಿಯ ಸಂತೆ; ಮಳೆಯೂ ಬಂದಿತ್ತು. ಸಂತೆಗೆ ಬಂದ ಪರಸ್ಥಳದ ಜನ ತುಮ್ಮಿನ ಕಟ್ಟಿಯಲ್ಲಿಯೇ ವಸತಿಮಾಡಿದ್ದರು. ರಾತೋ ರಾತ್ರಿಯೇ, ನಾಲ್ಕೈದು ನೂರು ಪರದೇಶಿ ಸಶಸ್ತ್ರ ಮಿಲ್ಟ್ರಿಯವರು ತುಮ್ಮಿನ ಕಟ್ಟಿ ಮತ್ತು ಮೆಣಶಿನಾಳ ಗ್ರಾಮಗಳನ್ನು ಮುತ್ತಿಗೆ ಹಾಕಿದರು. ಬೆಳಗಿನ ನಿತ್ಯಕರ್ಮಕ್ಕೆ ಯಾರನ್ನೂ ಹೊರಬಿಡಲಿಲ್ಲ. ಜನರಿಗೆ ಚಿತ್ರಹಿಂಸೆಕೊಟ್ಟರು.

ನಿಶ್ಶಸ್ತ್ರರಾದ ಜನತೆ ಏನು ಮಾಡಲು ಶಕ್ಯ ? ಮನೆ ಮನೆಗಳನ್ನು ನುಗ್ಗಿದರು ಗಂಡುಮಕ್ಕಳನ್ನು ಹಿಡಿದು ತಂದರು. ಆ ಕಾಲಕ್ಕೆ ಅಧಿಕಾರಿಗಳ ಬಾಯಿ ಗಂತೂ ಅಂಕೆಯೇ ಇರಲಿಲ್ಲ. ಅಶ್ಲೀಲವಾದ ಬೈಗುಳು, ಯಾವುದೇ ಮಾನವನ ಬಾಯಿಯಿಂದ ಬಾರದ ಮಾತುಗಳು; ಅದರಲ್ಲಿಯೂ ಪೈಶಾಚಿಕ ವೃತ್ತಿಯ ಪೋಲೀಸ ಇನಸ್ಪೆಕ್ಟರ ಪೈ ಎಂಬ ಮಹಾಶಯನ ಬಾಯಿ ತೀರ ನೋರೆದಪ್ಪಿತ್ತು. "ನಾವು ಕೆಂಪು ಜನರನ್ನು ತಂದಿರುವೆವು ಅವರಿಂದ ಬೀಜ ಹಿಡಿಮಕೊಳ್ಳಿರಿ" ಮುಂತಾಗಿ ಇನ್ನೂ ಬರೆಯಲು ಬಾರದ ಮಾತುಗಳ ಫೂತ್ಕಾರ ಸದಾ ಅವರ ಪಾಯಖಾನೆಯಂತಹ ಬಾಯಲ್ಲಿ ಉಲಿಯುತ್ತಲೇ ಇತ್ತು. ಕೆಂಪು ಜನರ ಉಪ ಯೋಗ ಚೆನ್ನಾಗಿ ತಕ್ಕೊಂಡು ತನ್ನ ಹೀನ ಗುಣಗಳನ್ನು ಪ್ರದರ್ಶಿಸಿದನು. ಹೀಗೆ ಜನತೆಯನ್ನು ಅಮಾನುಷ ರೀತಿಯಲ್ಲಿ ನಡೆಸಿಕೊಂಡು ದುರುಗವ್ವನ ಗುಡಿಯ ಬೈಲಿನಲ್ಲಿ ಊರಲ್ಲಿಯ ಎಲ್ಲ ಗಂಡುಮಕ್ಕಳನ್ನು ಕಲೆಹಾಕಿ ಬಲವಾದ ಮಿಲಿಟರಿ ಕಾವಲಿರಿಸಿದರು. ಪ್ಲುತ್ತು ಸುತ್ತಲೂ ಮಶಿನ್‌ಗನ್ ಹಚ್ಚಿ ನಿಮ್ಮ ಪೌರುಷ ತೋರಿಸಿರಿ ಮುಂತಾಗಿ ತಮ್ಮ ಅಧಿಕಾರದ ದರ್ಪ ತೋರಿಸಿದರು. ಆದರೆ ನಮ್ಮ ನಾಯಕನು ಅವರಿಗೆ ಸಿಕ್ಕಲಿಲ್ಲ. ಬಂದಿದ್ದಕ್ಕೆ ಕೆಲವರನ್ನು ಬಂಧಿಸಿ ಕರೆ ದೊಯ್ದರು. ಪೆಣಶಿನಾಳ ಗ್ರಾಮದಲ್ಲಾದರೂ ಇದೇ ತೆರನಾದ ದಬ್ಬಾಳಿಕೆ ಮಾಡಿ ಚಿತ್ರಹಿಂಸೆಮಾಡಿ ತಿಮ್ಮನಗೌಡರ ತಾಯಿ ಹಾಲಮ್ಮ ಮತ್ತು ಅವರ ಅಣ್ಣ ತಮ್ಮಂದಿರನ್ನು ಬಂಧುವರ್ಗದವರನ್ನು ಬಂಧಿಸಿ ಕೊಂಡುಹೋದರು.

ಇದರಿಂದ ತಪ್ತತರಾಗಿ ಗೌಡರು ತಮ್ಮ ಕಾರ್ಯವನ್ನು ಚುರುಕುಗೊಳಿಸಿ ಮೇದೂರ, ಮಾಸೂರ ಚಾವಡಿಗಳನ್ನು ಸುಟ್ಟರು. ಇವರು ಈ ಭಾಗವಲ್ಲಿ ಇರು ವರೆಂದು ಪರದೇಶಿ ಸೈನಿಕರಿಂದ ತಡಕನಹಳ್ಳಿ ಅಣಜಿ, ಮಾದಾಪುರ, ನಾಗವಂದ, ಗ್ರಾಮಗಳನ್ನು ಮುತ್ತಿ ಶೋಧಕಾರ್ಯ ನಡೆಸಿದರು. ಆ ಕಾಲಕ್ಕೆ ತಿಮ್ಮನಗೌಡರು ನಾಗವಂದ ಗ್ರಾಮ್ರದಲ್ಲಿಯಿದ್ದು – ಶೀರೆಯನ್ನುಟ್ಟುಕೊಂಡು ರೊಟ್ಟಿಮಾಡುತ್ತಾ ಕುಳಿತರು. ಮನೆಯಲ್ಲಿ ಸುಗ್ಗಿದ ಪೋಲಿಸರು ಇವರನ್ನು ಕಂಡು ಹೆಣ್ಣು ಮಕ್ಕಳು ಎಂದುಭಾವಿಸಿ ಅವರನ್ನು ಬಿಟ್ಟು. ಮತ್ತು ಕೆಲವರನ್ನು ಬಂಧಿಸಿದರು.

ಈ ಕಾಲಕ್ಕೆ ತಡಕನಹಳ್ಳಿಯಲ್ಲಿ ನಡೆದ ಒಂದು ಘಟನೆಯನ್ನು ಬರೆ ಯುವದನ್ನು ಬಿಟ್ಟರೆ ದ್ರೋಹವಾದೀತು. ತಡಕನಹಳ್ಳಿ ಗ್ರಾಮದಲ್ಲಿ ದೋಣಿ

ಸಾಲಿನ ಹುಲಿಗಳೆಂದು ಪ್ರಸಿದ್ಧಿಪಡೆದ ಪಾಟೀಲರ ಮನೆತನಗಳವೆ. ಈಮನೆತನ ದಲ್ಲಿ ಶ್ರೀ ಗಂಗನಗೌಡ, ಶ್ರೀ ಮಹಾದೇವಗೌಡ ಮೊದಲಾದವರು ರಾಜಕೀಯ ದಲ್ಲಿ ಪ್ರಸಿದ್ಧರು; ಇವರು ಹಂಸಭಾವಿಯಲ್ಲಿ ಇಂಗ್ಲೀಷ್ ಕಲಿತಿದ್ದರು. ಅವರಲ್ಲಿ ಶ್ರೀ ಕೆ ಎಫ್. ಪಾಟೀಲ ಮಾಸ್ಟರರ ನೆಚ್ಚಿನ ವಿದ್ಯಾರ್ಥಿಯಾಗಿದ್ದು ಶ್ರೀ ಗಂಗನಗೌಡರು ೧೯೩೨ರಲ್ಲಿಯೆ ಉಳಿದ ವಿದ್ಯಾರ್ಥಿಗಳೊಡನೆ ೩ವರ್ಷ ಕಾರಾಗೃಹ ಅನುಭವಿಸಿದ್ದರು. ಆವರ ದೇಶಪ್ರೇಮ ಉಜ್ವಲವಾಗಿತ್ತು. ಅಜ್ಞಾತವಾಗಿ ಕಾರ್ಯಮಾಡುತ್ತಿದ್ದರು. ತಿಮ್ಮನಗೌಡರಿಗೆ ತುಂಬಾ ನೆರವಯಿತ್ತಿದ್ದರು. ಇದನ್ನರಿತು ಗಂಗನಗೌಡರನ್ನು ಬಂಧಿಸಲು ಕರಾಳಕ್ಯೂರಿ ನಧಾಫಫೌಜದಾರರು ಸಶಸ್ತ್ರ ಸೈನಿಕರೊಂದಿಗೆ ಪ್ರವೇಶಮಾಡಿದರು. ಮನೆಯಲ್ಲಿದ್ದ ಮುದಿ ಹುಲಿ ಹನುಮಗೌಡರು (ಗಂಗನಗೌಡನತಂದೆ) ಇದನ್ನು ಕಂಡು ಒಂದೇನೇ ಗೆತಕ್ಕೆ ಫೌಜದಾರರ ಮೇಲೆರಗಿ, ರಟ್ಟೇ ಹಿಡಿನು ಮನೆಯ ಮುಂದಿನ ಹಕ್ಕೆಯಲ್ಲಿ ಬೀಳುವಂತೆ ಒಗೆದರು. ಮತ್ತು ಇಂದು ನೀನು ಕಣಿವೆ ಭಾಗದ ಹುಲಿಗವಿಯಲ್ಲಿ ಪ್ರವೇಶಿದ್ದೀ ಎಂಬುದನ್ನರಿಯದೆ ಕುಂಚಿಕೋರ. ಲಿಮಾಣಿಗಳ, ಭಟ್ಟಸೆರೆ ರೇಡ್‌ಅಂತಾ ತಿಳಿದಿರುವಿ ಏನು ? ಕರೆ ನಿನ್ನ ಮೇಲಾಧಿಕಾರಿಗಳನ್ನು ! ನೀನು ನೆನ್ನ ಮನೆಯಲ್ಲಿ ಅತಿಕ್ರಮಣ ರೀತಿಯಿಂದ ಪ್ರವೇಶ ಮಾಡಿರುವಿ ಈ ಬಗ್ಗೆ ನಿನ್ನ ಮೇಲೆ ನನ್ನದು ಫಿರ್ಯಾದ ಅದೆ ಅಂತಾಫೌರ್ಜಿಸಿದರು. ಇದರಿಂದ ನದಾಫ ಫೌಜಿದಾರನು ದಿಕ್ಕುಗಾಣದೆ ನಿಂತನು. ಮಿಲಿಟರಿಯವರು ಬಂದೂಕನ್ನು ಗೌಡರತ್ತ ತಿರುವಿದರು; ಆಗ ಫೌಜದಾರನು ಗೌಡರಿಗೆ ನಿಮ್ಮಮಗ ಗಂಗನಗೌಡರನ್ನು ನೋಡಬೇಕಾಗಿದೆ, ಕಾರಣ ನಿಮ್ಮ ಮನೆಗೆ ಬಂದೆ ಎಂದನು. ಅದಕ್ಕೆ ಗೌಡರು "ಫೌಜದಾರರೇ ನೀವು ಕಾಯದೆ ರಕ್ಷಕರು ಹೀಗಿದ್ದು ಪರಿಚಯವಿಲ್ಲದ ಮನೆಗಳನ್ನು ಪ್ರವೇಶಮಾಡುವದು ಆಕ್ರಮಣವೆಂಬುದು ನಿಮಗೆ ತಿಳಿಯುವದಿಲ್ಲವೇ" ಎಂದರು. ಆಗ ಫೌಜದಾರರು ಪಂಚರನ್ನು ಕರೆಯಿಸಿ ರುಜುತಿ ಮಾಡಿದರು. ಇಂಥ ಸಿಂಹಗಳು ಅಲ್ಲಲ್ಲಿ ಹಳ್ಳಿಗಳಲ್ಲಿ ಇದ್ದುದರಿಂದಲೇ ಈ ಆಂದೋಲನಕ್ಕೆ ಬಲ ಹಾಗೂ ಮೆರಗುಂಟಾಗಿತ್ತು.

ಶ್ರೀ ಗಂಗನಗೌಡರು ಹಂಸಭಾವಿಯಲ್ಲಿ ವಿದ್ಯಾರ್ಥಿಗಳಾಗಿದ್ದಾಗ ೧೯೩೨ರಲ್ಲಿ ಈಚಲ ಮರ ಕಡಿದುದ್ದಕಾಗಿ ಉಳಿದ ಅನೇಕ ವಿದ್ಯಾರ್ಥಿಗಳೊಡನೆ



ಬ್ಯಾಡಗಿಯಲ್ಲಿ ನೇತಾಜಿ ಸುಭಾಸಚಂದ್ರಬೋಸರು (೧೯೪೯) ಕೂತವರು : ಪಾಟೀಲ ಕಲ್ಲನಗೌಡರು, ಸೇನಾಪತಿ ಬಾಪಟ್ ಅವರ ಮಗ ವಾಮನ, ಸೇನಾಪತಿ ಬಾಪಟ್, ನೇತಾಜಿ ಸುಭಾಸ್ ಚಂದ್ರಬೋಸ್, ಮುರಿಗೆಪ್ಪ ನೋಟಗಿ, ಖಟಾವಕರ ಬಂಧುಗಳು (ಸತ್ಯೇಂದ್ರಪ್ಪ, ದತ್ತಾತ್ರಯ)

ಕರಿಯಪ್ಪ ಎರೆಸೀಮಿ
ಸಂಗೂರು



ಹುತಾತ್ಮ
ಮಹಪೇವ ಸೈಲಾರ ಸೋಟೆಬೆನ್ನೂರು

ದಿ. ಮಹರುದ್ರಪ್ಪ
ಉರಗಟ್ಟಿ ರಾಣೇಬೆನ್ನೂರು

ಎಸ್. ಆರ್. ನೆಪ್ತಿ ಹಂಸಭಾವಿ

ಸಿದ್ಧಲಿಂಗಯ್ಯ
ಹಿರೇಮಠ ಕಜ್ಜರಿ

ಕಲ್ಲನಗೌಡ ಪಾಟೀಲ
ಕಾಕೋಳ

ಸಿದ್ಧಪ್ಪ ಹುಂಬಿ
ಬ್ಯಾಡಿಗಿ



ಡಾ|| ಹೆಚ್. ವಿ. ಅಂಗಡಿ
ಹಲಗೇರಿ



ಲಕ್ಷ್ಮಣ ಹನುಮಪ್ಪ
ವಡೇರಹಳ್ಳಿ ಅಂತ್ರವಳ್ಳಿ



ಸಿದ್ದಪ್ಪ ಫಕೀರಪ್ಪ ಹಣಗಿ
ತುಮ್ಮಿನಕಟ್ಟಿ



ಹನುಮಂತಪ್ಪ ಹಾಲಮ್ಮನವರ
ಕಾಕೋಳ (ಹರಿಜನ)

ದಿ. ರಾಮಚಂದ್ರಪ್ಪ ಸಂಜೀವಪ್ಪ
ಕಟ್ಟರ ತುಮ್ಮಿನಕಟ್ಟಿ

ಎಸ್. ಎನ್. ಪಾಟೀಲ
ಕಾಕೋಳ

ಗೋಣೆಪ್ಪ ಸಾವಕಾರ
ಮೈದೂರು



ದ್ರೌಪತಿ ಅರ್ಕಸಾಲಿ
ಅಂತರವಳ್ಳಿ

ಬಸಯ್ಯ ಲೋಕನಗೌಡರ
ಅಸುಂಡಿ

ಮಲ್ಲೆಪ್ಪ ಬಣಕಾರ
ಚಿಕ್ಕೊಣತಿ

ಸಂಗನಬಸಪ್ಪ ಕುದರಿಹಾಳ
ಕಾಕೋಳ

ಸಣ್ಣೆಂಗಪ್ಪ ಕುದರಿಹಾಳ
ಕಾಕೋಳ

ದುರಿಗಪ್ಪ ಮುಗದೂರು (ಮುರಲಿ)
(ಹರಿಜನ) ಕಾಕೋಳ

ಹೆಚ್. ಓ. ಕೊಡ್ಲೇರ
ಹಂಸಭಾವಿ

ಸದಾಶಿವಪ್ಪ ಗುರಪ್ಪನವರ
ಮೇಡ್ಲೇರಿ



ದಿ| ಗುರುನಾಥ ನರಸಿಂಗ ಸಾಧೂತೆ
ರಾಣೇಬೆನ್ನೂರ



ಬಸನಗೌಡ ತಿಮ್ಮನಗೌಡ
ಪಾಟೀಲ ಮೆಣಸಿನಹಾಳ

ವೀರಾಪೇವಿ ಕರಿಯಪ್ಪ
ಸಂಗೂರ್

ಬಸಮ್ಮ ಕುಸುಗೂರು
(ಸುಣಕಲ್ಲಬಿದರಿ)

ಗದಿಗೆಮ್ಮಾ ಬಸಪ್ಪ ಹಂಪಾಳಿ
ತುಮ್ಮಿನಕಟ್ಟಿ

ದಿ. ಮಲ್ಲೇಶಪ್ಪ ಬಂದಮ್ಮನವರ
ಆರೇಮಲ್ಲಾಪುರ

ಕೈದಾಗಿ 3 ವರ್ಷ ಶಿಕ್ಷೆ ಅನುಭವಿಸಿದ್ದರು. ಆಗ ಶ್ರೀ ಕೆ ಎಫ್ ಪಾಟೀಲರು ಹಂಸಭಾವಿ ಆ ಶಾಲೆಯ ಹೆಡ್ ಮಾಸ್ತರರಾಗಿದುದ್ದರಲ್ಲದೆ ಅವರನ್ನು ಸರ್ಕಾರವು ಬಂಧಿಸಿ ೬ತಿಂಗಳ ಕಠಿಣ ಶಿಕ್ಷೆಗೆ ಗುರಿಮಾಡಿತ್ತು.

ಬ್ಯಾಡಗಿಯಿಂದ ಹಿರೇಕೇರೂರಿಗೆ ಬರತಕ್ಕ ಟಪಾಲ ಬಸ್ಸನ್ನು ಲೂಟಾಯಿಸ ಬೇಕೆಂದು ಯೋಚಿಸಿ ಬ್ಯಾಡಗಿ – ಹಾಂಸಭಾವಿಗಳ ನಡುವೆ ಬಿದಿರ ಕಟ್ಟೆಕೆರೆ ಹತ್ತಿರ ಸ್ಥಳ ನಿರ್ದಿಷ್ಟ ಪಡಿಸಿ, ಅಲ್ಲಿಗೆ ಬರಲು ಬಸ್ಸನ್ನು ತಡೆಯಬೇಕೆಂದು ಸದರಿ ಬಸ್ಸಿನಲ್ಲಿಯೇ ಪ್ರಯಾಣಿಕರಂತೆ ಪ್ರವಾಸ ಕೈಕೊಳ್ಳಲು ತಿರಕಪ್ಪ ಹುಯ್ಯಪ್ಪನವರ ಎಂಬವರನ್ನು ಮೊದಲೇ ಕಳಿಸಿದ್ದರು. ಆ ಪ್ರಕಾರ ತಿರಕಪ್ಪನು ಬಸ್ಸಿನಲ್ಲಿ ಪ್ರಯಾಣಿಕರಂತೆ ಟಪಾಲು ಬಸ್ಸಿನಲ್ಲಿ ಬಂದು ನಿರ್ದಿಷ್ಟ ಸ್ಥಳ ಬರಲು ಬಸ್ಸು ನಿಲ್ಲಿಸಲು ಹೇಳಿದನು. ಆಗ ಡ್ರಾಯವ್ಹರನು ನಿಲ್ಲಿಸಲು ಅನುಮಾನ ಮಾಡಲು ಪಿಸ್ತೂಲ ತೆಗೆದು ಡ್ರಾಯವ್ಹರನಿಗೆ ಬೆದರಿಕೆ ಹಾಕಿದನು. ಆಗ ಡ್ರಾಯವ್ಹರನು ಗಾಬರಿಯಾಗಿ ಬಸ್ಸ ತರುಬಿದನು. ಆಗ ತಿರುಕಪ್ಪ ಇಳಿದವನೆ ಟಾಯರಕ್ಕೆ ಗುಂಡಿಕ್ಕಿ ನಿರ್ವಾತ ಮಾಡಿದನು ಮತ್ತು ಸಂಕೇತ ಮಾಡಿದನು. ಅವಿತುಕೊಂಡಿದ್ದ ತಿಮ್ಮನಗೌಡರು ಹಾಗೂ ಸಂಗೂರ ಕರಿಯಪ್ಪನವರು ತಮ್ಮ ಸಂಗಡಿಗರೊಂದಿಗೆ ಬಸ್ಸಿನ ಮೇಲೆರಗಿ ಎಲ್ಲ ಟಪಾಲ ಚೀಲಗಳನ್ನು ಅಪಹರಿಸಿ ಅವರಲ್ಲಿಯ ಹಣ ಮುಂತಾದ ಉಪಯುಕ್ತ ಸಾಮಾನುಗಳನ್ನು ತಕ್ಕೊಂಡು ಎಲ್ಲ ಕಾಗದಗಳಿಗೆ ಅಗ್ನಿ ಸ್ಪರ್ಶಮಾಡಿಸಿದರು.

ಇಷ್ಟರಲ್ಲಿಯೇ ತಿಮ್ಮನಗೌಡರ ಮೇಳವು ಬಂದೂಕ ಪಿಸ್ತೂಲ ಕೈ ಬಾಂಬ ಮೊದಲಾದ ಮಾರಕಾಸ್ತ್ರಗಳಿಂದ ಸುಸಜ್ಜಿತವಾಗಿತ್ತು. ಇವರನ್ನು ಚಿಕ್ಕ ಪುಟ್ಟ ಪೋಲಿಸ ಪಡೆಯಿಂದ ಎದುರಿಸುವುದು ಅಸಾಧ್ಯವಾಗಿತ್ತು. ಇದನ್ನರಿತು ಸರಕಾರವು ದೊಡ್ಡ ಪಡೆಯನ್ನೇ ನಿಯಮಿಸಿ ಕಂಡಲ್ಲಿ ಗುಂಡಿಕ್ಕಲು ಆಜ್ಞೆ ಮಾಡಿತು. ಇದನ್ನರಿತು ತಿಮ್ಮನಗೌಡರು ಬಹು ಎಚ್ಚರಿಕೆಯಿಂದ, ಪೂರ್ಣ ಯೋಚನೆಯಿಂದ ಕಾರ್ಯಮಾಡಹತ್ತಿದರು. ಮತ್ತು ಹಳೆಯ ಮೈಸೂರ ಪ್ರಾಂತದ ಕಾಗಿನೆಲ್ಲಿ, ಜೀನಹಳ್ಳಿ, ಮುಂತಾದ ಹಳ್ಳಿಗಳಲ್ಲಿ ವೇಷಾಂತರದಿಂದ ಇದ್ದು ತಮ್ಮ ಕಾರ್ಯಕ್ರಮ ತಯಾರಿಸುದಲ್ಲಿ ಮಗ್ನರಾಗಿದ್ದರು. ಮತ್ತು ಕಾರ್ಯಕ್ರಮ ತಯಾರಿಸಿಕೊಂಡು ಮಿಂಚಿನ ವೇಗದಲ್ಲಿ ಆ ಕಾರ್ಯಗಳನ್ನು

ಮಾಡಹತ್ತಿದರು. ಅವರ ಮೇಳ ದಿನದಿನಕ್ಕೆ ಬೆಳೆಯುತ್ತಿತ್ತು. ಆದರೆ ಖರ್ಚು ಬಹಳ ಬರಹತ್ತಿತ್ತು. ತಮ್ಮಲ್ಲಿದ್ದ ನಗದು ಹಣ ತೀರಿತು. ಬರಿಗೈಯಿಂದ ಈ ಕಾರ್ಯ ನಡೆಯಿಸುವುದು ಕಠಿಣವೆನಿಸಿ ಗುಪ್ತವಾಗಿಯೆ ಮನೆಗೆ ಬಂದು ತಮ್ಮ ಸ್ಥಿರಾಸ್ತಿ ಎಂಬತ್ತು ಎಕರೆ ಜಮೀನದಲ್ಲಿ ಕೆಲವು ಜಮೀನ ಅಡವು ಮಾಡಿ ಹತ್ತು ಸಾವಿರ ರೂಪಾಯಿಗಳ ಸಾಲಮಾಡಿದರು. ಈ ರಕಮನ್ನೆಲ್ಲ ಕ್ರಾಂತಿ ಕಾರ ತಂಡಕ್ಕೇನೇ ವಿನಿಯೋಗಿಸಿದರು.

ಕೆಲವುದಿನ ಸುಮ್ಮನೆ ಅಜ್ಞಾತವಾಸದಲ್ಲಿಯಿದ್ದು ಬೇಸತ್ತು ತಮ್ಮ ತಂಡ ದೊಂದಿಗೆ ಬಂದು ತುಮ್ಮಿನಕಟ್ಟಿ ಔಟ ಪೋಸ್ತ ಪೋಲೀಸನ ಕ್ವಾರ್ಟರನ್ನು ಸುಟ್ಟರು. ಮತ್ತು ರಾಣೇಬೆನ್ನೂರ ಸ್ಟೇಶನದಿಂದ ಪೋಲೀಸ ಪಹರೆಯಲ್ಲಿ ಬರತಕ್ಕ ಟಪಾಲ ಅಪಹರಿಸಿದ್ದಲ್ಲದೆ ಕಾವಲಿನ ಪೋಲೀಸರ ಬಂದೂಕ ಕಸಿದು ಕೊಂಡರು. ಈ ಕಾರ್ಯದಲ್ಲಿ ಅಂತರವಳ್ಳಿ ಗ್ರಾಮದ ಅಡಿವಪ್ಪ ವೆಂಕಟರೆಡ್ಡಿ, ಶ್ರೀಪತಿ ಎಂಬವರು ಬಹು ಚಾಣಾಕ್ಷ ಕೆಲಸ ಮಾಡಿದರು. ಇವರ ತಂಡದ ಕೆಲ ಕ್ರಾಂತಿಕಾರರು ತುಮ್ಮಿನಕಟ್ಟಿಗೆ ಬರತಕ್ಕ ಟಪ್ಪಾಲನ್ನು ಸಂಗಾಪುರದ ಬಳಿ ಅಪ ಹರಿಸಿದರು. ಹೀಗೆ ಇನ್ನೂ ಅನೇಕಾನೇಕ ಕಾರ್ಯಗಳನ್ನು ಮಾಡುತ್ತಾಯಿ ರಲು, ಸರಕಾರವು ಇವರಆ ಸ್ತಿ ಮತ್ತು ಪೀಕತಾಬಾ ತಕ್ಕೊಂಡಿತು. ಇದನ್ನರಿತು ತಿಮ್ಮನಗೌಡರು ಒಂದುದಿನ ಮೆಣಸಿನಾಳಕ್ಕೆ ಬಂದು ಕೊಯಲಿಗೆ ಬಂದ ಅಜ ಮಾಸು, ೧೫೦ ಚೀಲ ಆಗತಕ್ಕಂಥ ಜೋಳದ ಪೀಕನ್ನು ಬಡ ಬಗ್ಗರಿಗೆ ಕೊಯ್ದುಕೊಂಡು ಹೋಗಲು ಸ್ವತಃ ನಿಂತು ತಿಳಿಸಿದರು. ಆ ಪ್ರಕಾರ ಒಂದೇ ರಾತ್ರಿಯಲ್ಲಿ ಜೋಳದ ಪೈರುಗಳೆಲ್ಲಾ ಮಾಯವಾದವು. ಇತರೆ ಮೆಣಸಿನ ಕಾಯಿ, ಹತ್ತಿ ಮೊದಲಾದ್ದ ಪೀಕುಗಳನ್ನು ಸರಕಾರಕ್ಕೆ ಸಿಕ್ಕದಂತೆ ಬಡವರು ತೆಗೆದು ಕೊಂಡೊಯ್ಯಲು ಹೇಳಿದರು. ಇದರಿಂದ ತಿಮ್ಮನಗೌಡರಿಗೆ ೫೫-೬೦ ಸಾವಿರ ರೂಪಾಯಿಗಳ ನಷ್ಟವಾಯಿತು. ಈ ತೆರನಾಗಿ ಅನೇಕ ರೀತಿಯಿಂದ ಸರಕಾರವು ಹೇಯ ಕೃತಿಯನ್ನು ಎಸಗಿದರೂ ವೀರ ತಿಮ್ಮನಗೌಡರು ಎದೆಗುಂದ ಲಿಲ್ಲ. ಮತ್ತಿಷ್ಟು ಹುರುಪಿನಿಂದ ಕಾರ್ಯ ಮಾಡಹತ್ತಿದರು.

ಮುಂದೆ ಗ್ರಾಮಸ್ತರ ದಪ್ತರುಗಳನ್ನು ಚಾವಡಿ ಮುಂತಾದ ಸರಕಾರಿ ಆಸ್ತಿ ಮತ್ತು ಕಾಗದ ಪತ್ರಗಳನ್ನು ಸುಡುವ ಕಾರ್ಯಕ್ರಮಗಳನ್ನು ಕ್ರಾಂತಿಕಾರರು

ಮಾಡಹತ್ತಿದರು. ಇದರಿಂದ ಸರಕಾರದ ಕಾರ್ಯ, ಹಪ್ತೆ ವಸೂಲಿ ಕೆಲಸ ನಡೆಯದಂತಾಯಿತು. ಎಲ್ಲ ಗ್ರಾಮಸ್ಥರ ದಪ್ತರುಗಳನ್ನು ತಾಲೂಕ ಕಚೇರಿಯಲ್ಲಿ ಡಲಾಯಿತು. ಹಪ್ತೆ ವಸೂಲಿ ಕೆಲಸವನ್ನು ಗುಪ್ತುಗಳನ್ನಾಗಿ ಮಾಡಿ ಪೋಲೀಸರ ಕಾವಲಿನಿಂದ ಮಾಡಹತ್ತಿದರು; ಆಯಾ ಗುಪ್ತುದ ಎಲ್ಲ ಗ್ರಾಮಸ್ಥರು ಗ್ರಪ್ಪ ಗ್ರಾಮದ ಚಾವಡಿಯಲ್ಲಿರತಕ್ಕದ್ದು; ಸಂಬಂಧಿಸಿದ ಹಳ್ಳಿಗಳ ರೈತರು ಅಲ್ಲಿಗೆ-ಹೋಗಿ ಹಪ್ತೆಕೊಡಬೇಕು; ಹೀಗೆ ಶೇಖರಣೆಯಾದ ಹಪ್ತೆರಕಮು ತಾಲೂಕಾ ಟ್ರೇಝರಿಗೆ ಪೋಲೀಸರ ಕಾವಲಿನಿಂದ ಜಮಾಕ್ಕೆ ಕಳಿಸುತ್ತಿದ್ದರು. ಈ ಯೋಜನೆಯನ್ನು ಕ್ರಾಂತಿಕಾರರು ತಿಳಿದು ಇಂಥಹ ಹಪ್ತೆ ಲೂಟಿ ಮಾಡುವ ಯೋಜನೆಯನ್ನು ಹಾಕಿಕೊಂಡರು. ಆಗ ಮಹಾದೇವ ವೈಲಾರ, ಮತ್ತು ತಿಮ್ಮನಗೌಡರು ಅಜ್ಞಾತ ಸ್ಥಳದಲ್ಲಿ ಸಂಧಿಸಿ ಹೊನ್ನತ್ತಿ ಹಪ್ತೆಯನ್ನು ವೈಲಾರರು, ಕುಪ್ಪೇಲೂರ ಹಪ್ತೆಯನ್ನು ತಿಮ್ಮನಗೌಡರು ತಮ್ಮಗುಂಪುಗಳೊಂದಿಗೆ ಲೂಟಿಮಾಡುವ ಕಾರ್ಯಕ್ರಮ ಹಾಕಿಕೊಂಡರು. ಮತು ಸಶಸ್ತ್ರ ಪೋಲೀಸರನ್ನು ಎದುರಿಸಲು ಬಂದೂಕ, ಪಿಸ್ತೂಲ,ಕೈಬಾಂಬುಗಳಿಂದ ದಾಳಿಮಾಡುವ ಯೋಜನೆಯನ್ನು ರೂಪಿಸಿದರು.

ಕುಪ್ಪೇಲೂರ ಹಪ್ತೆಲೂಟಿ

೧೪–೨–೪೩ರಂದು ತಿಮ್ಮನಗೌಡರು ತನ್ನ ದಳದ ಎಲ್ಲ ಸೈನಿಕರಿಗೆ ಆಂತರವಳ್ಳಿಯಲ್ಲಿಗೆ ಬರಲು ತಿಳಿಸಿದ ಪ್ರಕಾರ ಎಲ್ಲರೂ ಕೂಂಡಿಕೊಂಡು ಹೊರಟು ರಾತ್ರಿ ಹತ್ತು ಗಂಟೆಯ ಸಮಯಕ್ಕೆ ಕುಪ್ಪೇಲೂರಿಗೆ ಬಂದರು.

ಕುಪ್ಪೇಲೂರ ಚಾವಡಿಯಲ್ಲಿ ಸಂಬಂಧಿಸಿದ ಹಳ್ಳಿಗಳ ಗ್ರಾಮಸ್ಥರು ತಾವು ಶೇಖರಿಸಿದ ಹಪ್ತೆದರ ಕಮನ್ನು ಶೇಕದಾರರ ಕಡೆಗೆ ಜಮಾ ಮಾಡಿದ್ದರು. ಸದರ ರಕಮನ್ನು ಚಾವಡಿಯ ಖೋಲಿಯಲ್ಲಿ ಇಟ್ಟುಖೋಲಿಗೆ ಬೀಗ ಹಾಕಲಾಗಿತ್ತು. ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ತಮ್ಮ ಲೆಕ್ಕಪತ್ರಗಳನ್ನು ಮಾಡುವುದು, ಚಲನ ತಯಾರಿಸುವದರಲ್ಲಿ ತೊಡಗಿದ್ದರು. ಕಾವಲಿನ ಪೋಲೀಸರು ಊಟ ತೀರಿಸಿಕೊಂಡು ತಮ್ಮ ಕಾವಲಿನ ಕರ್ತವ್ಯ ಮಾಡುತ್ತಿದ್ದರು. ಆಗ ಒಮ್ಮಿಂದೊಮ್ಮೆಲೆ ಮಿಂಚಿನಂತೆ ತಿಮ್ಮನಗೌಡರು ತಮ್ಮ ಗುಂಪಿನೊಂದಿಗೆ

ಚಾವಡಿಯ ಮೇಲೆ ದಾಳಿ ಮಾಡಿದರು. ಮತ್ತು ಕಾವಲಿದ್ದ ಎಲ್ಲ ಪೋಲೀಸರ ಬಂದೂಕುಗಳನ್ನು ಕಸಿದುಕೊಂಡರು. ಇದನ್ನು ನೋಡಿ ಅಲ್ಲಿದ್ದ ಶಾನುಭೋಗರು ಕಕ್ಕಾವಿಕ್ಕಿಯಾದರು. ಹಪ್ತೆರಕಮ ಎಲ್ಲಿದೆ ಎಂದು ಪಾಟೀಲರು ಗರ್ಜಿಸಿದರು. ಅದಕ್ಕೆ ಶಾನುಭೋಗರು ಖೋಲಿಯಲ್ಲಿದೆ ಎಂದರು. ಕೀಲಿತೆಗೆಯಲು ಆಜ್ಞೆ ಮಾಡಿದರು. ಕೀಲಿಯು ಸರ್ಕಲ್ ಇನಸ್ಪೇಕ್ಟರರ ಕಡೆಯಿದೆ ಅವರು ಊರಲ್ಲಿ ಊಟಕ್ಕೆ ಹೋಗಿರುವರು ಎಂದುತ್ತರ ಸಿಕ್ಕಿತು. ಕಾರಣ ಕೀಲಿ ಮುರಿಯಲು ಮಗ್ಗಲಲ್ಲಿಯೇ ನಿಂತಿದ್ದ ಚನಬಸಪ್ಪ ವಾಸಣದ ಎಂಬುವನಿಗೆ ಹೇಳಿದರು. ಚನಬಸಪ್ಪನು ತನ್ನ ಕೈಲಿದ್ದ ಕೊಡಲಿಯಿಂದ ಏಟು ಹಾಕ ಹತ್ತಿದನು. ಹಾಕಿದ ಪೆಟ್ಟುಗಳು ಸಂದಿನಲ್ಲಿರತಕ್ಕ ಕೀಲಿಗೆ ಬೀಳದೆ ಗೋಡೆಗೆ ಬಾಗಿಲ ತೋಳಿಗೆ ಬೀಳ ಹತ್ತಿದ್ದವು. ಆಗ ಪಾಟೀಲರು ಚನ್ನಬಸಪ್ಪನ ಕೈಲಿರತಕ್ಕ ಕೊಡಲಿ ಕಸಿದುಕೊಂಡು ಏಟು ಕೊಟ್ಟರು ಕೀಲಿ ಮುರಿಯಿತು. ಆದರೆ ತಮ್ಮ ಎಡಕೈಲಿರತಕ್ಕ ಕೈಬಾಂಬು ಕೈ ಬಿಗಿತದಿಂದ ಸ್ಫೋಟವಾಗಿ ಎಡಗೈಯನ್ನು ಛಿದ್ರ ಛಿದ್ರ ಮಾಡಿತ್ತು. ಇದನ್ನು ಲೆಕ್ಕಿಸದೆ ಹಪ್ತೆ ಲೂಟಮಾಡಿಕೊಂಡು ಹೊರಟರು. ಪಾಟೀಲರ ಎಡಗೈಯಿಂದ ಒಂದೇ ಸಮನೇ ರಕ್ತ ಸುರಿಯ ಹತ್ತಿತು. ಅರಿವೆಯ ಪಟ್ಟೇ ಕಟ್ಟಿದರೂ ನಿಲ್ಲಲಿಲ್ಲ. ಹೆಚ್ಚು ರಕ್ತ ಶ್ರಾವವಾಗಿ ಪಾಟೀಲರು ಮೂರ್ಛೆಹೊಂದಿದರು. ಸಂಗಡಿಗರು ಗಾಬರಿಯಾಗಿ ಅವರನ್ನು ಹೊತ್ತುಕೊಂಡು ಹೊರಟರು. ಆಗ ಪಾಟೀಲರು ತುಂಗಭದ್ರ ಆಡಿಯ ದಡಲ್ಲಿರತಕ್ಕ ಪಾಳ್ಯಕ್ಕೆ ಹೋಗಲು ಆದೇಶವಿತ್ತರು. ಅಲ್ಲಿ ಅವರ ಸೋದರಿ ಮತ್ತು ಬಳಗ ಬಹಳವಿತ್ತು. ಅಲ್ಲಿಗೆ ಹೋಗಿ ಎಷ್ಟೇ ಪ್ರಯತ್ನಮಾಡಿದರೂ ರಕ್ತ ಶ್ರಾವ ನಿಲ್ಲಲಿಲ್ಲ. ನಿತ್ರಾಣರಾದರು. ಇದರಿಂದ ಕಂಗೆಟ್ಟ ಅವರ ಬಳಗ ಮತ್ತು ಸಂಗಡಿಗರು ಡಾಕ್ಟರರ ಕಡೆಗೆ ದಾವಣಗೇರಿಗೆ ಉಪಚಾರಕ್ಕೆ ಕರೆದೊಯ್ಯಲು ಆಲೋಚನೆ ನಡೆಯಿಸಿದರು. ಆಪರೆ ಅದಕ್ಕೆ ಪಾಟೀಲರು ಒಪ್ಪಲಿಲ್ಲ; ನಾನು ಸರಕಾರಕ್ಕೆ ಸಿಕ್ಕುವಂತಿಲ್ಲ. ಭಾರತದ ಬಂಧ ವಿಮೋಚನೆಗೆ ಮಾಡತಕ್ಕ ಕೆಲಸಗಳು ಬಹಳೇ ಇವೆ. ಕಾರಣ ಈ ಘಾಯವು ಏನೂ ಮಾಡಲಾರದು ಹಳ್ಳಿಯಲ್ಲಿಯೇ ಮಾಡತಕ್ಕ ಗಿಡಮೂಲಿಕೆ ಉಪಚಾರ ಮಾಡ್ರಿ ಅಂತಾ ಹೇಳಿದರು. ಆ ಪ್ರಕಾರ ಹಳ್ಳಿಯ ತಜ್ಞ ವೈದ್ಯರ ಉಪಚಾರ ನಡೆಯಿತು. ಆದರೆ ಆದ ಘಾಯ ಬಲವಾಗಿತ್ತು ಮತ್ತು ರಕ್ತ ವಿಶೇಷ ಹೋಗಿತ್ತು. ಹೀಗಾಗಿ ಅವರಿಗೆ ಧನುರ್ವಾತ

ಬಂದಿತು. ಆಗ ಗೆಳೆಯರು ದಿಕ್ಕುಗಾಣದೆ ತುಮ್ಮಿನಕಟ್ಟೆಗೆ ತಕ್ಕೊಂಡು ಬಂದು ಚೋಳನಹಳ್ಳಿಯವರ ಮನೆಯಲ್ಲಿಟ್ಟು ವೈದ್ಯ ಭುಜಂಗರಾವ ಐರಣಿಯವರಿಗೆ ತೋರಿಸಿದರು. ಆಗ ವೈದ್ಯರು ಒಂದು ದಿನ ಉಪಚರಿಸಿ, ಇದು ಇಲ್ಲಿ ಗುಣವಾಗಲು ಶಕ್ಯನಿಲ್ಲ; ದಾವಣಗೇರಿಗೆ ತಕ್ಕೊಂಡು ಹೋಗಿ ಎಂದು ಸಲಹೆ ಮಾಡಿದರು. ಆ ಪ್ರಕಾರ. ಚಕ್ಕಡಿಗೆ ಹಿಂದು ಮುಂದು ಬುರುಕೆ ಹಾಕಿ ಘೋಷಾ ಹೆಂಣುಮಕ್ಕಳ ಗಾಡಿ ಎಂಬತೆ ಮಾಡಿ, ಆ ಗಾಡಿಯಲ್ಲಿ ದಾವಣಗೇರಿಗೆ ತಕ್ಕೊಂಡು ಹೋದರು. ಅಲ್ಲಿ ಶ್ರೀ ಶಿವಾಜರಾವ್ ಐರಣಿ ಶ್ರೀ ಪವಾಡಪ್ಪ ಐರಣಿ ಮೊದಲಾದ ತಿಮ್ಮನಗೌಡರ ಗೆಳೆಯರ ಬಳಗವು ಕೂಡಿಕೊಂಡು ತಜ್ಞ ಡಾಕ್ಟರರಿಗೆ ತೋರಿಸಲಾಯಿತು. ಇಂಥಃ ವೀರನ ಈ ದುಸ್ಥಿತಿ ಕಂಡು ಡಾಕ್ಟರರು ಬಹಳೇ ಮರುಗಿದರು. ಈಗ ನಾಲ್ಕು ದಿನಗಳ ಮುಂಚೆ ತಂದಿದ್ದರೆ ಬದುಕಿಸ ಬಹುದಿತ್ತು ಆದರೆ ಈಗ ಅಂತ್ಯಾವಸ್ಥೆಯಲ್ಲಿದೆ. ಎಂದು ಶಕ್ಯವಾದಷ್ಟು ಉಪ ಚರಿಸಿಪರತ ತಕ್ಕೊಂಡು ಹೋಗಲು ಬಹು ದುಃಖದಿಂದ ಹೇಳಿದರು.

ಹುತಾತ್ಮ ತಿಮನಗೌಡರ ನೇತೃದಲ್ಲಿ ನಡೆದ ಬ್ಯಾಡಗಿ ರೇಲ್ವೆ ಸ್ಟೇಶನ್ ಮೇಲೆ ದಾಳಿ, ಬಿದರಕಟ್ಟೆ ಟಪಾಲ್ ಬಸ್ ಲೂಟ ಮೊದಲಾದ ಅನೇಕ ಘಟನೆಗಳಲ್ಲಿ ಕುಪ್ಪೇಲೂರ ಹಪ್ತೆ ಲೂಟಿಯು ಕೊನೆಯದಾಗಿದೆ. ಇದು ನಡೆದುದು ೧೮-೨-೪೩ ರ ಮಧ್ಯರಾತ್ರಿಯಲ್ಲಿ; ಅಂದು ನಡೆದ ದುರಂತದಲ್ಲಿ ಕೈಬಾಂಬ ಸ್ಫೋಟದ ಹಾಗೂ ಪೋಲಿಸರೊಡನೆ ಆದ ತಿಕ್ಕಾಟದಲ್ಲಿ ಹು. ತಿಮ್ಮನಗೌಡರು ತೀವ್ರಗಾಯಗೊಂಡರೂ ಧೈರ್ಯಗುಂದದೆ ಹೋರಾಡಿ ಪೋಲಿಸರ ಕೈಗೆ ಸಿಗದಂತೆ ತಮ್ಮ ಸಿಬ್ಬಂದಿಗಳೊಡನೆ ಪಾರಾದರು. ಆದರೆ ಅವರ ಗಾಯಗಳಿಗೆ ಔಷಧೋಪಚಾರದ ಸಮಸ್ಯೆ ಕಾರ್ಯಕರ್ತರನ್ನು ಚಿಂತೆಗೀಡುಮಾಡಿತು. ಕಾರ್ಯಕರ್ತರು ತಿಮ್ಮನಗೌಡರನ್ನು ಎತ್ತಿನ ಗಾಡಿ ಮಾಡಿಕೊಂಡು ದಾವಣಗೆರೆಗೆ ಗುಪ್ತವಾಗಿ ಒಯ್ದು; ಅಲ್ಲಿ ತರುಣ ಕಾಂಗ್ರೆಸ್ ಕಾರ್ಯಕರ್ತರ ಸಲಹೆಯ ಮೇರೆಗೆ ಡಾ॥ ಗುರುನಾಥ ಪಂಡಿತರೆಂಬ ಆಯುರ್ವೇದ ವೈದರ ಶುಶ್ರೂಷೆಗೆ ಒಳಪಡಿಸಲು ಬಹಳ ಪ್ರಯತ್ನಪಟ್ಟರು. ಆದರೆ ದುರ್ದೈವದಿಂದ ಅದು ಸಾಧ್ಯವಾಗಲಿಲ್ಲ. ಗುರುನಾಥ ಪಂಡಿತರು ದೇಶಾಭಿಮಾನಿಗಳಾಗಿ

ದ್ದರೂ ಈ ಕೇಸಿನ ವಿಷಯದಲ್ಲಿ ಅವರು ಸಂಶಯಗ್ರಸ್ಥರಾದರಲ್ಲದೆ ಇದನ್ನು ಗುಣಪಡಿಸುವ ಬಗೆಗೂ ಅವರು ನಿರಾಶೆ ತಾಳಿದ್ದರು.

ಈ ಮಧ್ಯೆ ಸಂಗೂರ ಕರಿಯಪ್ಪನೂ ದಾವಣಗೆರೆ ಆಸ್ಪತ್ರೆಯಲ್ಲಿ ಕೈದಾಗಿ ಕೈ ಬಾಂಬ ಸ್ಫೋಟದ ಗಾಯಕ್ಕೆ ಕೈ ಕಡಿಸಿಕೊಂಡು ಉಪಚಾರ ಹೊಂದುತ್ತಿದ್ದನು. ಅವರ ಹಾಗೂ ಅವರ ಸಂಗಡಿಗರ ಬಗೆಗೆ ಸರಕಾರಿ ವಲಯಗಳಲ್ಲಿ ಎದ್ದಿದ್ದ ಊಹಾಪೋಹ ಹಾಗೂ ಜನತೆಯಲ್ಲಿ ಹಬ್ಬಿದ್ದ ಗುಲ್ಲುಗಳಿಂದಾಗಿ ಯಾರೂ ಹೊಣೆಗಾರಿಕೆ ಹೊರಲು ಸಿದ್ಧರಾಗಲಿಲ್ಲವೆಂದು ತೊರುತ್ತದೆ. ಆದುದರಿಂದ ತಿಮ್ಮನಗೌಡರನ್ನು ಕಾರ್ಯಕರ್ತರು ಪುನಃ ನಂದಿಗುಡಿಗೆ ತಂದರು. ಅಷ್ಟರಲ್ಲಿ ಅವರಿಗೆ ತಿಮ್ಮನಗೌಡರು ಉಳಿಯುವದು ಸಾಧ್ಯವೇ ಇಲ್ಲವೆಂದು ಖಚಿತವಾಗಹತ್ತಿತು. ಆಗ ತಿಮ್ಮನಗೌಡರ ಆದೇಶದ ಪ್ರಕಾರ ತನ್ನ ಜನ್ಮ ಭೂಮಿಯಲ್ಲಿಯೆ ತಾನು ಮಣ್ಣಾಗಬೇಕೆಂಬ ಹಂಬಲದಂತೆ ಅವರನ್ನು ಮೆಣಸಿನಹಾಳಕ್ಕೆ ಸಾಗಿಸುವದನ್ನು ನಿರ್ಧರಿಸಿ, ಊರಿಂದ ಗುಪ್ತವಾಗಿ ಅವರ ಮನೆಯ ನಚ್ಚಿನ ಆಳಿನ ಮುಖಾಂತರ ಎತ್ತಿನ ಗಾಡಿಯನ್ನು ತರಿಸಿ ತುಂಗಭದ್ರಾ ನದಿಯ ಪಶ್ಚಿಮ ಭಾಗದಲ್ಲಿಯೆ ಕೂಸಗಟ್ಟಿಯ ಹತ್ತಿರಕ್ಕೆ ಇರಿಸಿದರು. ರಾತ್ರಿ ೧ ಗಂಟೆ ನಂತರ ತಿಮ್ಮನಗೌಡರನ್ನು ಹೆಗಲ ಮೇಲೇರಿಸಿಕೊಂಡು ೪-೬ಜನ ವಿಶ್ವಾಸಿಕ ಕಾರ್ಯಕರ್ತರು ನದೀ ದಾಟ ಹತ್ತಿದರು. ಬೆಳಗಿನ ೩ಗಂಟೆ ಜಾವಕ್ಕೆ ಮಧ್ಯನದೀ ಭಾಗದಲ್ಲಿರುವಾಗಲೆ ಕಾರ್ಯಕರ್ತರ ಹೆಗಲ ಮೇಲೆಯ ತಿಮ್ಮನಗೌಡರ ಪ್ರಾಣಪಕ್ಷಿ ಹಾರಿದ್ದನ್ನು ಗಮನಿಸಿ ಅವರು ಕಕ್ಕಾವಿಕ್ಕಿ ಆದರು.

ಆದರೂ ಕಾರ್ಯಕರ್ತರು ಎದೆಗುಂದದೆ ತಿಮ್ಮನಗೌಡರ ಅಂತಿಮ ಆಶೆಯನ್ನು ನೆರವೇರಿಸಲ್ಲು ನಿರ್ಧರಿಸಿ, ಹೆಣವನ್ನು ಚಕ್ಕಡಿ ಮೇಲೆ ಹೇರಿಕೊಂಡು ತುಮ್ಮಿನಕಟ್ಟೆಯ ಮೇಲಿಂದಲೇ ಹಾದು ಮೆಣಸಿನಹಾಳಕ್ಕೆ ಬೆಳಿಗ್ಗೆ ೪-೩೦ರ ಸುಮಾರಿಗೆ ತಲ್ಪಿ ಅವರ ಹೆಣವನ್ನು ಅವರ ಕಟ್ಟೆಯ ಮೇಲೆ ಮಲಗಿಸಿ, ಮೇಲೆ ಸಂಜೆ ಹೊದಿಸಿ, ಯಾರ ಕಣ್ಣಿಗೂ ಬೀಳದೆ ಪರಾರಿ ಆದರು. ಆ ಗುಂಪಿನಲ್ಲಿ ಶ್ರೀ ಸಿದ್ಧಲಿಂಗಸ್ವಾಮಿ ಕಜ್ಜರಿ, ಶಿವನಗೌಡ ಪಾಟೀಲ ತುಮ್ಮಿನಕಟ್ಟಿ ಮೊದಲಾದವರಿದ್ದುದು ಖಚಿತವಾಗಿ ತಿಳಿದು ಬಂದಿದೆ.

ತುಮ್ಮಿನಕಟ್ಟಿ ಮೇಲಿಂದ ಯಾರದೋ ಚಕ್ಕಡಿ ಹಾದುಹೋದ ಸಂಶಯದಿಂದ ಹಿಂದಿನಿಂದೆಲೇ ಬೆನ್ನಟ್ಟಿದ ಪೋಲಿಸರು ಅದೇ ಚಕ್ಕಡಿಯನ್ನೇ ಕಟ್ಟಿಸಿ

ಕೊಂಡು ಆ ಹೆಣವನ್ನು ರಾಣಿಬೆನ್ನೂರ ಪೋಲಿಸ ಕಚೇರಿಗೆ ತಂದು ಒಲ್ಲರಿಸಿ ದರು. ಆ ಹೆಣ ತಿಮ್ಮನಗೌಡರದೇ ಎಂದು ಖಚಿತಮಾಡಿಕೊಳ್ಳಲು ಅವರ ಪತ್ನಿ ಮೊದಲಾದವರನ್ನು ಕರಿಸಿ ಚೌಕಸಿಮಾಡಿ, ಪಂಚನಾಮಾ ಮಾಡಿ, ರಾಣಿ ಬೆನ್ನೂರನಲ್ಲಿಯೆ ಅವರ ಹೆಣವನ್ನು ದಫನಮಾಡಿದರೆಂದು ತಿಳ್ಸಿದಿದೆ. ಈ ರೀತಿ ೧೯೪೩ನೇ ಫೆಬ್ರುವರಿ ಕೊನೆಯ ವಾರದಲ್ಲಿ ಹುತಾತ್ಮ ತಿಮ್ಮನಗೌಡರ ದೇಹವು ಏಕಾಂಗಿಯಾಗಿ ಸರಕಾರಿ ಅಧಿಕಾರಿಗಳಿಂದಲೇ ರಾಣಿಬೆನ್ನೂರ ಮಣ್ಣಿನಲ್ಲಿಯೇ ಮಣ್ಣಾಗಿ ಬೆರೆತು ತಾಲೂಕಿಗೂ, ನಾಡಿಗೂ ಚಿರಸ್ಫೂರ್ತಿ ದಾಯಕವಾಗಿದೆ. ಸಾಹಸ ಧೈರ್ಯ ತ್ಯಾಗ ಬಲಿದಾನಗಳ ಸಂಕೇತವಾಗಿ ಅವರ ಹೆಸರು ಪ್ರಜ್ವಲಿಸುತ್ತದೆ.

ಸ್ಮಾರಕ ದೃಷ್ಟಿಯಿಂದ ತಾಲೂಕು ಕಾಂಗ್ರೆಸ ಕಮಿಟಿಯ ವತಿಯಿಂದ ಕಾಂಗ್ರೇಸ ಆಫೀಸ ಆವರಣದಲ್ಲಿ ಬಾವಿಯೊಂದನ್ನು ನಿರ್ಮಿಸುವ ಕಾರ್ಯ ವನ್ನು ಕಾರ್ಯದರ್ಶಿಯಾಗಿದ್ದ ಕಜ್ಜರಿ ಸಿದ್ದಲಿಂಗಸ್ವಾಮಿಗಳು ಪ್ರಯತ್ನಿಸಿದರು. ಆದರೆ ಆ ಭಾಗದಲ್ಲಿ ಸಿಹಿನೀರು ಸಿಗದ್ದರಿಂದ ಅದು ಯಶ ಹೊಂದಲಿಲ್ಲ ಈಗ ಸರಕಾರದವರು ಹುತಾತ್ಮರ ಹೆಸರಿನಿಂದ ಸ್ಮಾರಕ ಶಿಲಾ ಶಾಸನಗಳನ್ನು ನಿಲ್ಲಿಸು ವವರಿದ್ದು ಅದನ್ನು ರಾಣಿಬೆನ್ನೂರಿನ ಕೋರ್ಟಿನ ಈಶಾನ್ಯ ದಿಕ್ಕಿನ ಬಾಗದಲ್ಲಿ 4ನೆಯ ರಾಷ್ಟ್ರೀಯ ಹೆದ್ದಾರಿಗೆಹೊಂದಿ, ಬಸ್‌ಸ್ಟ್ಯಾಂಡ್ ಎದುರಿನಲ್ಲಿ ನಿರ್ಮಿ ಸಲು ಪ್ರಯತ್ನಗಳು ನಡೆದಿವೆ. ಕಾರ್ಯ ಶೀಘ್ರದಲ್ಲಿ ನೆರವೇರುವ ಆಶೆ ಇದೆ.

ಛತ್ರಪತಿ ಶಿವಾಜಿಯ ಬಲಗೈಯ್ಯಂತೆ ಎಸೆ ಶೂರ ನೇತಾಜಿಪಾಲ್ಕರನಂತೆ ಇವರ ಮೇಳದಲ್ಲಿದ್ದ ದಿ॥ ವೆಂಕಪ್ಪಶೇತ್ಸಂದಿ ಎಂಬಾತನಾದರೂ ಅಜ್ಞಾತವಾಸ ದಲ್ಲಿರುವಾಗ ಕಾಲರಾ ಬೇನೆ ಬಂದು ಯೋಗ್ಯ ಉಪಚಾರವಿಲ್ಲದೆ ವೀರಸ್ವರ್ಗವ ನ್ನೈದಿದನು.

ಇಂಥ ಅನೇಕ ವೀರಪುಂಗವರ ಬಲಿದಾನದಿಂದ ನಾವು ಸ್ವತಂತ್ರ ಭಾರತದ ಪ್ರಜೆಗಳಾಗಿರುತ್ತೇವೆ ಎಂಬುದನ್ನು ನೆನೆದು ಅವರ ಆದರ್ಶಜೀವನ ಮಾರ್ಗದಲ್ಲಿ ನಡೆದುದಾದರೆ ಅವರ ಆತ್ಮಕ್ಕೆ ಶಾಂತಿ ದೊರಕದಿರುವುದು. ಇಂಥಹ ತ್ಯಾಗವೀರರ ಸ್ಮಾರಕಗಳನ್ನು ರಚಿಸುವದರಿಂದ ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶನಕೊಂದು ಉತ್ತಮ ನೆನಹು ಆಗುವಲ್ಲಿ ಸಂದೇಹವಿಲ್ಲ.

ಅನುಬಂಧ

ಟಿಪ್ಪಣಿ ೩ — ೧೯೪೨ರ ಚಲೇಜಾವ್ ಚಳವಳಿಯ ಕ್ರಾಂತಿಕಾರೀ ಘಟನೆಗಳ ಲ್ಲೊಂದರ ಸಾಕ್ಷ್ಯಸೂಚಿ; ಬ್ಯಾಡಿಗಿ ರೈಲ್ವೆ ಸ್ಟೇಶನ್‌ದ ಮೇಲೆ ನಡೆ ಸಲಾದ ಹಲ್ಲೆಯ ಪ್ರಕರಣದ ಪ್ರತಿಧ್ವನಿ.

(ಸ್ವಾತಂತ್ರ್ಯ ಯೋಧರನ್ನು ಬಂಧಿಸಿ ಚಳವಳಿಯನ್ನು ಸದೆಬಡೆಯುವ ಸರಕಾರದ ಪ್ರಯತ್ನದಲ್ಲಿ ನಡೆದಿದ್ದ ಗುಪ್ತ ಪತ್ರವ್ಯವಹಾರದ ಒಂದು ಪತ್ರವನ್ನು ವಾಚಕರ ಗಮನಕ್ಕೆ ತರುವುದು ಈ ಸಂಧರ್ಭಕ್ಕನುಚಿತವೆನಿಸಿದ್ದರಿಂದ ಅಂಥ ಪತ್ರವೊಂದರ ಕನ್ನಡ ಭಾಷಾಂತರವನ್ನು ಈ ಕೆಳಗೆ ಕೊಡಲಾಗಿದೆ. ಅದು ಆ ಕಾಲದ ಸಂಘಟನೆ, ಕಾರ್ಯಕ್ರಮ, ಕಾರ್ಯಕರ್ತರು ಮೊದಲಾದವುಗಳ ಬಗೆಗೆ ಸೂಕ್ಷ್ಮವೂ ಸೂಚಕವೂ ಆದ ವಿಷಯವನ್ನು ಬಹಿರಂಗ ಪಡಿಸುತ್ತದೆ.)

ಗುಪ್ತಪೋಲಿಸರ ವರದಿ ಪತ್ರದ ಕನ್ನಡಾನುವಾದ

(ಸರಕಾರದ ಗುಪ್ತ ಪೋಲಿಸ ಶಾಖೆಯ ಧಾರವಾಡ ಆಫೀಸಿನ ಫೈಲ್ ನಂ ೫. ಆಯ್. ಎನ್. ಸಿ. /43ರ ಪುಟ ೭೭, ೭೯, ಲಕ್ಷಿಂದ ಉದ್ಧರಿಸಿದ್ದು)

"ರಹಸ್ಯ

ಕ್ಯಾಂಪ್ ಧಾರವಾಡ
೧–೨–೧೯೪೩

ಸರ್,

ಬಾಡಿಗಿ ರೇಲ್ವೆ ಸ್ಟೇಶನ್ ಮೇಲೆ ನಡೆದ ಹಲ್ಲೆಯಲ್ಲಿ ಮುಖ್ಯ ಆಪಾದಿತ ರಾದ ಸಂಗೂರಿನ ಕರಿಯಪ್ಪ ನೀಲಪ್ಪ ಎರೇಶೀಮಿ ಅವರನ್ನು ೨೪-೧-೧೯೪೩ ರಂದು ಮೈಸೂರ ಸಂಸ್ಥಾನದ ದಾವಣಗೆರೆಯಲ್ಲಿ ದಸ್ತಗಿರಿ ಮಾಡಲಾಗಿದೆ. ದೇಶೀ ಬಾಂಬು ತಯಾರಿಸುವ ಕಾಲಕ್ಕೆ ಆದ ಸ್ಫೋಟದಿಂದ ಆವರ ಕೈಗೆ ಆದ ಗಾಯಕ್ಕಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ಸುದ್ದಿ ತಿಳಿದಕೂಡಲೆ ಸ್ಪೇಶಲ್ ಡ್ಯೂಟಿಯ ಮೇಲಿದ್ದ ಸಬ್‌ಇನ್‌ಸ್ಪೆಕ್ಟರ ಎ. ಪಿ. ಶೇಖರ ಅವರನ್ನು ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಡೆ. ಬಿಸಿ. ಎನ್

ಡಿ. ಅವರೇ ದಾವಣಗೆರೆಗೆ ಕಳಿಸಿದರು. ಕರಿಯಪ್ಪನನ್ನು ಸಂದರ್ಶಿಸಿ, ಪ್ರಶ್ನಿಸಿ ಕಾಂಗ್ರೆಸಿನ ಗುಪ್ತ ಚಟುವಟಿಕೆಗಳ ಬಗೆಗೆ ಹೆಚ್ಚಿನ ಬೆಳಕು ಕಂಡು ಹಿಡಿಯುವದೇ ಅವರ ಉದ್ದೇಶವಾಗಿತ್ತು.

ಸದರಿ ಕರಿಯಪ್ಪನು ಸದರಿ ಶೇಖ ಹಾಗೂ ಚಿತ್ರದುರ್ಗದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಎದುರು ತನ್ನ ಜವಾಬುಕೊಟ್ಟಿದ್ದಾನೆ. ಬ್ಯಾಡಗಿ ಸ್ಟೇಶನ್ ಲೂಟಿಯನ್ನು ಸಂಘಟಿಸಿದ್ದು ಮಾತ್ರವಲ್ಲದೆ ತಾನು ಅದರಲ್ಲಿ ಪ್ರತ್ಯಕ್ಷ ಭಾಗವಹಿಸಿದ್ದಾ ದಿಯೂ ಆತನು ಸ್ವತಃ ಒಪ್ಪಿಕೊಂಡಿದ್ದಾನೆ. ಅದರಂತೆ ಬಿದರಕಟ್ಟೆ ಹತ್ತಿರ ಬ್ಯಾಡಗಿ ಹಿರೇಕೇರೂರ ಟಪಾಲು ಬಸ್ಸನ್ನು ಕೊಳ್ಳೆಹೊಡೆದುದನ್ನೂ ಅಲ್ಲದೆ ಹಿರೇಕೇರೂರ ರಾಣೆಬೆನ್ನೂರ ತಾಲೂಕುಗಳಲ್ಲಿ ನಡೆದ ಇನ್ನೂ ಅನೇಕ ವಿಧ್ವಂಸಕ ಚಟುವಟಿಕೆಗಳನ್ನೂ ಸಂಘಟಿಸಿ, ಸ್ವತಃ ಕಾರ್ಯಗತಮಾಡಿದ್ದಾಗಿ ಹೇಳಿದ್ದಾನೆ. ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ನಾಯಕರ ನೇತೃತ್ವದಲ್ಲಿ ಕಾರ್ಯಕರ್ತರ ಸಂಘಟನೆ ಹೇಗೆ ಇದ್ದಿತೆಂಬುದರ ಬಗ್ಗೆಯೂ ಅವನು ಕಲ್ಪನೆ ಕೊಟ್ಟಿದ್ದಾನೆ.

ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ನಾಲ್ಕು ಜನ ನಾಯಕರ ನೇತೃತ್ವದಲ್ಲಿ ನಾಲ್ಕು ಗುಂಪುಗಳು ಕೆಲಸಮಾಡುತ್ತಿದ್ದನ್ನು ಆವನು ವಿವರಿಸಿದ್ದಾನೆ ಆ ನಾಯಕರುಗಳೆಂದರೆ (೧) ಶಿವಪ್ಪನೆಶ್ವಿ. (೨) ತಿಮ್ಮನಗೌಡ ಮೆಣಸಿನಾಳ (೩)ಮಹದೇವ ವೈಲಾರ (೪) ಕರಿಯಪ್ಪೆ ಸಂಗೂರ. ಈ ಮುಖಂಡರುಗಳು ಅನುಕ್ರಮವಾಗಿ (೧)ಬಲಭೀಮ (೨) ಬಲವಂತ (೩) ಕಬೀರ (೪) ದಶರಥ ಎಂಬ ಗುಪ್ತನಾಮಧರಿಸಿ ಅನುಕ್ರಮವಾಗಿ (೧) ಹಿರೇಕೇರೂರ (೨) ರಾಣೆಬೆನ್ನೂರ (೩)ಹಾವೇರಿ ಹಾಗೂ (೪) ಹಿರೇಕೇರೂರ ಭಾಗಗಳನ್ನು ಸಾಮಾನ್ಯವಾಗಿ ತಮ್ಮ ಕಾರ್ಯಕ್ಷೇತ್ರಗಳನ್ನಾಗಿ ಇರಿಸಿಕೊಂಡಿದ್ದಾರೆ. ಇಂಥವೇ ಸಾಂಕೇತಿಕ ನಾವುಗಳನ್ನು ಧರಿಸಿದ ಮತ್ತೆ ಕೆಲ ಮುಖಂಡರು ಮೇಲಿನಿಂದ ಬಂದ ಆದೇಶಗಳನ್ನು ಪಡೆಯುವದು, ಎ. ಐ. ಸಿ. ಸಿ. ಮೋಹರುಳ್ಳ ಸಂದೇಶಗಳನ್ನು ದೊರಕಿಸುವುದು ಹಾಗೂ ಆವನ್ನು ಈ ಮುಖಂಡರಿಗೆ ತಲ್ಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಅಂಥ ಸುತ್ತೋಲೆಗಳನ್ನು ಗುರುತಿಸಿ, ಅವುಗಳಲ್ಲಿಯ ಕಾರ್ಯಕ್ರಮದ ಸಂದೇಶಗಳನ್ವಯ ಈ ಮುಖಂಡರು ಕಾರ್ಯನಡೆಸುತ್ತಾರೆ. ಭೂಗತವಾಗಿ ಕಾರ್ಯನಿರ್ವಹಿಸುತ್ತಿದ್ದ ಕೆ. ಪಿ. ಸಿ. ಸಿ. ಯು ಗುಪ್ತ ಸಂಘಟ

ನೆಯ ಮೂಲಕ ಇವರಿಗೆ ಹಣ ಒದಗಿಸುತ್ತದೆ. ಇವರು ತಮ್ಮ ಕಾರ್ಯಗಳ ವರದಿಯನ್ನು ನಿರ್ದಿಷ್ಟ ಪಡಿಸಿದ ಕೆಲವ್ಯಕ್ತಿಗಳ ಮೂಲಕ ಕೆ. ಪಿ. ಸಿ. ಸಿ.ಗೆ ಒಪ್ಪಿಸುತ್ತಿದ್ದಾರೆ. ಅಲ್ಲದೆ ಸಧ್ಯನಡೆದಿರುವ ವಿಧ್ವಂಸಕ ಕಾರ್ಯಕ್ರಮಗಳ ನಿರೂಪಣೆಯ ನಿರ್ಧಾರದ ಕಾಲಕ್ಕೆ ನ್ಹಿ. ವ್ಹಿ. ಪಾಟೀಲರಂಥ ಕೆಲಮುಖಂಡರು ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ಕೂಡಲೆ ಕೈಬಿಡಾಗಿ ಸೆರೆಮನೆ ಸೇರಿದ್ದಾರೆ. ಕರಿಯಪ್ಪನ ಜವಾಬಿನ ಪ್ರಕಾರ ಕಾಂಗ್ರೆಸ್ ಕಾರ್ಯಕರ್ತರು ನಿರತವಾಗಿರುವ ಎಲ್ಲ ಚಟುವಟಿಕೆಗಳೂ ಎ. ಆಯ್. ಸಿ. ಸಿ. ಯಿಂದ ಕಳಿಸಲ್ಪಟ್ಟ ಆದೇಶಗಳಿಗನುಗುಣವಾಗಿಯೇ ನಡೆದಿವೆ.

ನಕಲನ್ನು ಎ. ಡಿ. ಆಯ್ ಸಿ. ಐ. ಬಿ. ಆಯ್. ಸಿ. ಆಯ್ ಡಿ ಬಿ. ಪಿ. ಪೂನಾ ಅವರುಗಳಿಗೆ ಅರ್ಪಿಸಲಾಗಿದೆ.

ತಮ್ಮ ವಿಧೇಯ ಸೇವಕ,

(ಸಹಿ) ....

ಸಬ್ ಇನ್‌ಸ್ಪೆಕ್ಟರ್, ಸಿ.ಆಯ್.ಡಿ.ಪೂನಾ.

(ದಿ. ಗ. ಸ. ಹಾಲಪ್ಪ ಅವರು ಬರೆದ 'History of Freedom Movement in Karanatak' ಎಂಬ ಗ್ರಂಥದ ಎರಡನೆ ಸಂಪುಟದ ಪುಟ ೯೫ರಿಂದ ಆಯ್ದುಕೊಂಡಿದ್ದು)

ಇದು ಗುಪ್ತ ಪೋಲಿಸರ ವರದಿಯ ಒಂದು ನಮೂನೆ, ಇವರಲ್ಲಿನ ಕೆಲವು ಅಂಶಗಳು ನಿಜವಾಗಿದ್ದರೂ ಅದರಿಂದ ಅಂದಿನ ಕಾಂಗ್ರೆಸ ಚಟುವಟಿಕೆಗಳ ಪೂರಾಕಲ್ಪನೆ ಬರಲು ಸಾಧ್ಯವಿಲ್ಲ. ತಮಗೆ ದೊರೆತ ಅಲ್ಪ ಸ್ವಲ್ಪ ಮಾಹಿತಿಯ ಮೇಲಿಂದ ಪೋಲಿಸರು ತಮ್ಮ ಕಲ್ಪನೆಗೆ ತಕ್ಕಂತೆ ಕಥೆಗಳನ್ನು ಕಟ್ಟುವುದೂ, ತಮ್ಮದೆ ಆದ ನಿರ್ಧಾರಕ್ಕೆ ಬಂದು ಅದರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದೂ ಸ್ವಾಭಾವಿಕ. ಈ ಘಟನೆ ನಡೆದ ಕಾಲಕ್ಕೆ ದಾವಣಗೆರೆ ಮೈಸೂರು ಮಹಾರಾಜರ ಸಂಸ್ಥಾನದ ಅಡಳಿತದಲ್ಲಿತ್ತು. ಬ್ಯಾಡಗಿ ತಾಲೂಕೂ ರಚನೆ ಆಗಿರಲಿಲ್ಲ. ರಾಣಿಬೆನ್ನೂರ ತಾಲೂಕಿನ ಸುಣಕಲ್ ಬಿದರಿಯ ಸೌ॥ ಕುಸುಗೂರ ಬಸಮ್ಮ ಅವರ ಜೋಳದ ಹೊಲದಲ್ಲಿ ದೇಶೀಬಾಂಬ ಕಟ್ಟುವಾಗ ಅದು ಸ್ಫೋಟವಾಗಿ, ಕರಿಯಪ್ಪ ದಾವಣಗೆರೆ ಆಸ್ಪತ್ರೆ ಸೇರಿದ್ದು ನಿಜ.

ಈ ಘಟನೆ ನಡೆವ ಮುನ್ನಿನ ದಿನ ಅವರು ನಮ್ಮ ಸದಾನಂದ ಪ್ರೌಸ್ಸಿನಲ್ಲಿ ತಂಗಿದ್ದರು. ಮುಂದೆ ಅವರ ಬಲಗೈ ಕತ್ತರಿಸಿಕೊಳ್ಳಬೇಕಾಯಿತು. ಈಗಲೂ ಒಂಟಿಗೈಯವರಾಗಿ ಬರೆಯುವದನ್ನು ಕೂಡ ಎಡಗೈಯಿಂದಲೇ ಮಾಡುತ್ತಾರೆ. ಸರ್ವೋದಯ ಕಾರ್ಯಕರ್ತರಾಗಿ ಹಾವೇರಿ ತಾಲೂಕಿನ ತಮ್ಮೂರಾದ ಸಂಗೂರಿನಲ್ಲಿ ನೆಲೆಸಿದ್ದಾರೆ. ಗಾಂಧಿ ಆದರ್ಶದಂತೆ ಹುಬ್ಬಳ್ಳಿಯ ಹರಿಜನ ಬಾಲಿಕಾಶ್ರಮದಲ್ಲಿ ಓದುತ್ತಿದ್ದ ಶಿಶಿಯ ವೀರಮ್ಮನೆಂಬ ಹರಿಜನ ಮಹಿಳೆಯನ್ನು ಮದುವೆಯಾಗಿ ಮನೆತುಂಬ ಮಕ್ಕಳೊಂದಿಗರಾಗಿದ್ದಾರೆ. ಒಬ್ಬ ಮಗನು ಪೋಲಿಸ ಖಾತೆಯಲ್ಲಿ, ಸಬ್ ಇನ್‌ಸ್ಪೆಕ್ಟರರಾಗಿದ್ದಾರೆ. ಅಂಥವರ ಬಾಯಿಂದ ಸ್ವಾತಂತ್ರ್ಯ ಸಂಗ್ರಾಮದ ಕಥೆ ಕೇಳಿದರೆ ನಿಜ ಸಂಗತಿ ತಿಳಿದೀತು. ಈ ಘಟನೆಗೆ ಸಂಬಂಧಿಸಿದವರಲ್ಲಿ ಕೆಲವರು ಇನ್ನೂ ಜೀವಂತವಿದ್ದಾರೆ. ಕರಿಯಪ್ಪನ ಜೊತೆಗಾರರಾಗಿ ಕಾರ್ಯನಿರತರಾದ್ದ ತಿಮ್ಮನಗೌಡ ಮೆಣಸಿನಾಳ ಹಾಗೂ ಮಹದೇವ ಮೈಲಾರ ರಂಥವರು. ದಬ್ಬಾಳಿಕೆಗೆ ತುತ್ತಾಗಿ ಹುತಾತ್ಮರಾಗಿದ್ದಾರೆ. ಶಿವಪ್ಪನೆಶ್ವಿ ಅವರು ಈಗ ಹಂಸಭಾವಿಯಲ್ಲಿ ಡಾಕ್ಟರರಾಗಿದ್ದುಕೊಂಡು ಒಳ್ಳೆ ಜೀವನ ನಡೆಸಿದ್ದಾರೆ. ನಿಜವಾದ ಸಂಗತಿಗಳ ಮೇಲೆ ನಮ್ಮ ಇತಿಹಾಸದ ರಚನೆ ಆಗಬೇಕಾದರೆ ಆಕಾಲಕ್ಕೆ ನಡೆದ ಸತ್ಯ ಸಂಗತಿಗಳೂ ಅವುಗಳ ಹಿನ್ನಲೆ ಹಾಗೂ ಪರಸ್ಪರ ಸಂಬಂಧಗಳನ್ನೂ ಅರಿಯುವುದು ಅತ್ಯವಶ್ಯ.

ಮೇಲ್ಕಾಣಿಸಿದ ನಾಲ್ಕು ಗುಂಪುಗಳಿಗೆ ಮೇಲಿನ ಸಂಪರ್ಕದ ಗೊಣಸು ಎಲ್ಲಿ ? ಆಕಾರ್ಯವನ್ನು ಯಾರು ಮಾಡುತ್ತಿದ್ದರು. ? ಎಂಬ ವಿಷಯವನ್ನು ಕರಿಯಪ್ಪ ತನ್ನ ಜವಾಬಿನಲ್ಲಿ ಹೇಳಿದಿರುವುದು ಸ್ವಾಭಾವಿಕ. ಆದರೆ ಆ ಮಾಹಿತಿಯನ್ನು ಹೊರಗೆಡುವಲು ಪ್ರಶ್ನೆಗಳನ್ನು ಹ್ಹಾಕಿ ಉತ್ತರ ಪಡೆಯುವ ಜಾಣತನವನ್ನು ಸಬ್ ಇನ್‌ಸ್ಪೇಕ್ಟರ ಶೇಖರು ಯಾಕೆ ಮಾಡಲಿಲ್ಲವೆಂಬುದು ಒಳ ವಿಷಯ ತಿಳಿಯದಿದ್ದವರಿಗೆ ಆಶ್ಚರ್ಯದ ಸಂಗತಿ ಎನಿಸುತ್ತದೆ. ಆದರೆ ಅದರಲ್ಲಿ ಅಂಥ ಲೋಪ ಅಥವಾ ಆಶ್ಚರ್ಯಕ್ಕೆ ಆಸ್ಪದ ವಿರಲಿಲ್ಲ. ಉದ್ದೇಶ ಪೂರ್ವಕವಾಗಿಯೇ ಆ ವಿವರಗಳನ್ನು ಅಲಕ್ಷಿಸಲಾಗಿದೆ ಹಾಗೂ ಮುಚ್ಚಿಡಲಾಗಿದೆ ಎಂಬಲ್ಲಿ ಎಳ್ಳಷ್ಟೂ ಸಂದೇಹವಿರಲಾರದು. ಕರಿಯಪ್ಪನ ಜವಾಬಿನ ವಿಷಯವನ್ನು ಶ್ರೀ ಶೇಖರೇ ನನಗೆ ಆಗ ಹೇಳಿ ನಾನು ಅಂದಿನಿಂದ ಕೆಲಸಮಾಡದೆ ಸುಮ್ಮನಿರುವಂತೆ ವಿನಂತಿಸಿದ್ದರು.

ಆ ಕಾರ್ಯವನ್ನು ನಾನು ಸ್ವತಃ ಮಾಡುತ್ತಿದ್ದೆನೆಂಬದು ಶೇಖಸಾಹೇಬರಿಗೆ ಗೊತ್ತಿತ್ತು. ನಾಲ್ಕೂ ಗುಂಪುಗಳ ಸಂಪರ್ಕ ಹೊಂದಿದ್ದ ನಾನು ಕೂಡಲೇ ಸೆರೆಮನೆಗೆ ಸೇರದೆ ಶಕ್ಯವಾದಷ್ಟು ದಿನ ಹೊತಗುಳಿದು ಕೆಲಸಕ್ಕೆ ನೆರವಾಗ ಬೇಕೆಂಬುದೇ ಕಾರ್ಯಕರ್ತರ ಆಗ್ರಹವಾಗಿತು. ಅವರಿಗೆ ಅವಶ್ಯವಿದ್ದ ಸಂದೇಶ, ಕಾರ್ಯಕ್ರಮಗಳನ್ನು ತಲುಪಿಸುವುದು, ಅನುಕೂಲತೆಗಳನ್ನು ಒದಗಿಸುವುದು, ಅವರ ಕಾರ್ಯದ ವರದಿಯನ್ನು ಮೇಲಿನವರಿಗೆ ಸಾಂಕೇತಿಕವಾಗಿ ಕಳಿಸು ವುದೂ ನನ್ನ ಪಾಲಿನ ಹೊಣೆಯಾಗಿತ್ತು. ಆಗಾಗ ಈ ಮುಖಂಡರು ಬ್ಯಾಡಿಗ್ಗೆ ಬರುತ್ತಿದ್ದರು. ರಾತ್ರಿ ಕಂಬಳಿ ಹೊದ್ದುಕೊಂಡು ಮುರಿಗೆಪ್ಪ ಶೆಟ್ಟರ ಅಂಗಡಿಯ ಮುಂದಿನ ಮೆಣಸಿನಕಾಯಿ ಅಂಡಿಗೆಗಳ ಮೇಲೆ ಕೂತು ಮಾತಾ ನ್ತಾಡಿಕೊಂಡು ಅಲ್ಲಿಯೇ ಮಲಗಿ ಯಾವಾಗಲೋ ಎದ್ದು ಹೋಗುತ್ತಿದ್ದರು. ನಮ್ಮ ಸದಾನಂದ ಪ್ರಿಂಟಿಂಗ ಪ್ರೆಸ್ಸು ಪಕ್ಕದಲ್ಲಿಯೆ ಇದ್ದುದರಿಂದ ಸಂಪರ್ಕಕ್ಕೆ ಬಹಳ ಅನುಕೂಲವಾಗಿತ್ತು. ಆಗ ಮೆಣಸಿನಕಾಯಿ ಪೇಟೆಗೆ ಬರುವ ಸುಗ್ಗಿಯ ಕಾಲವೂ ಇತ್ತು.

ಆ ಕಾಲಕ್ಕೆ ನಾನು ಜಿಲ್ಲಾ ಸ್ಕೂಲಬೋರ್ಡ ಚೇರಮನ್ನ ಹಾಗೂ ಬ್ಯಾಡಗಿ ನಗರ ಸಭಾಧ್ಯಕ್ಷನಾಗಿದ್ದೆ. ಈ ಎರಡು ಹುದ್ದೆಗಳಿಂದಾಗಿ ನನಗೆ ಜಿಲ್ಲೆಯ ಮೇಲಿನ ಅಧಿಕಾರೀ ವರ್ಗದ ಸಂಪರ್ಕ ಸದಾ ಬರುತ್ತಿತ್ತು. ಮುಂಬೆ ಬಂಗಾಲವ ಗವರ್ನರಾದ ಡಾಯಸ್‌ರು ಆಗ ಧಾರವಾಡ ಜಿಲ್ಲಾ ಕಲೆಕ್ಟರರಾಗಿದ್ದರು. ಶಾಲಾಕಟ್ಟಡಗಳನ್ನು ಸುಡಕೂಡದೆಂಬ ಸುತ್ತೋಲೆ ಹೊರಡಿಸಿ ನಾನು ಬಹಿರಂಗವಾಗಿ ಕಾಂಗ್ರೆಸ ಕಾರ್ಯಕರ್ತರಿಗೆ ಬಿನ್ನವಿಸಿಕೊಂಡ ದ್ದರಿಂದ ನನ್ನ ಬಗೆಗೆ ಅಧಿಕಾರಗಳಲ್ಲಿ ಹೆಚ್ಚು ವಿಶ್ವಾಸ ಮೂಡಿತ್ತು. ಆಲ್ಲದೆ ಬ್ಯಾಡಿಗಿ ನಗರ ಸಭೆಯ ರಾಜಕೀಯವು ನನ್ನನ್ನು ಕೂಡಲೆ ಕೈದಾಗದಂತೆ ಒ-ಒತಿಂಗಳು ತಡೆಗಟ್ಟಿತು. ಆಗಿನ ಪರಿಸ್ಥಿತಿ ಹಾಗೂ ಸನ್ನಿವೇಶಗಳೇ ನಾನು ಹೊರಗುಳಿದು ಕಾರ್ಯಕರ್ತರಿಗೆ ನೆರವಾಗಿಲಿಕ್ಕೆ ಕಾರಣಗಳಾಗಿವೆ. ೧೯೩೨ರ ಭೂಗತ ಸಮಯದ ನನ್ನ ಕಟು ಅನುಭವದಿಂದಾಗಿ ನಾನು ಭೂಗತನಾಗಿ ಕಾರ್ಯನಿರ್ವಹಿಸಲು ಸಿದ್ಧನಿರಲಿಲ್ಲ. ನನಗೆ ಬೇಕಾದುದು ನೇರವಾದ ಜೈಲುವಾಸ.

ಈ ನಾಲ್ಕೂ ಗುಂಪಿನ ಹಾಗೂ ನನ್ನ ನಿಕಟ ಸಂಬಂಧದ ವಿಷಯ ಹೊರಗಿನ ಅನೇಕರಿಗೆ ಗೊತ್ತಿರಲಿಲ್ಲ. ಆದರೆ ಶೇಖಸಾಹೇಬರು ಬ್ಯಾಡಗಿಯ ದೊಡ್ಡ ಮುಲ್ಲಾ ಸಹೇಬರ ಅಳಿಯಂದರಾದುದರಿಂದ ಅವರಿಗೆ ನನ್ನ ರಾಜಕೀಯವು ತಿಳಿಯದ ವಿಷಯವಾಗಿರಲಿಲ್ಲ. ಬ್ಯಾಡಗಿ ನಗರ ಸಭೆಯಲ್ಲಿ ದೊಡ್ಡ ಮುಲ್ಲಾ ಅವರು ಪ್ರಮುಖ ಸದಸ್ಯರು. ಸ್ಟ್ಯಾಂಡಿಂಗ್ ಕಮಿಟಿ ಚೇರಮನ್ನರು. ನಮ್ಮ ಪಕ್ಷ ಒಂದೇ ಒಂದು ಹೆಚ್ಚಿನ ಬಹುಮತದ ಮೇಲೆ ನಿಂತಿತ್ತು. ಬ್ಯಾಡಗಿ ನಗರ ಸಭೆಯ ಪಕ್ಷಗಳ ಈರ್ಷೆ ತುರುಸುಗಳು ಬಹುಕಾಲದಿಂದ ಪ್ರಸಿದ್ಧಿ ಪಡೆದಿದ್ದವು. ನಾನು ಕೈದಾದರೆ ಮುಲ್ಲಾ ಸಾಹೇಬರ ಪಕ್ಷ ಬಿದ್ದು ಹೋಗಿ ಅಧಿಕಾರ ಕಳೆದುಕೊಳ್ಳುವ ಪ್ರಸಂಗ ವಿದ್ದುದರಿಂದ ಅವರು ಸದಾ ನನ್ನ ಸಂರಕ್ಷಣೆಯಲ್ಲಿ ಆಸ್ಥೆ ವಹಿಸುತ್ತಿದ್ದರು. ಆದರೆ ನನ್ನ ಸ್ವಾತಂತ್ರ್ಯದ ಚಟುವಟಿಕೆಗಳನ್ನು ಬಿಡಿಸುವುದು ಅವರಿಂದ ಶಕ್ಯವಿರಲಿಲ್ಲವಾದುದರಿಂದ ತಮಗೆ ಪರಿಚಯವಿದ್ದ ಅಧಿಕಾರಿಗಳಿಗೆಲ್ಲ ಹೇಳಿಕೊಂಡು ನನ್ನ ಬಗೆಗೆ ಸಹಾನುಭೂತಿ ಹುಟ್ಟುವಂತೆ ವರ್ತಿಸುತ್ತಿದ್ದರು. ಕರಿಯಪ್ಪನ ಹೇಳಿಕೆಯ ಬಗೆಗಿನ ಪೋಲಿಸರ ವರದಿಯಲ್ಲಿ ನನ್ನ ಹೆಸರು ಬೈಲಿಗೆ ಬರದಿರುವದಕ್ಕೆ ಈ ಸಹಾನುಭೂತಿಯೇ ಕಾರಣವೆಂಬುದು ಸ್ಪಷ್ಟವಾಗಿತ್ತು. ನಾನು ಮುಂದೆ ೨ತಿಂಗಳಲ್ಲಿಯೆ ಕೈದಾಗಲೇಬೇಕಾಗಿ ಬಂದು ಡೆಟೆನ್ಯು ಆಗಿ ಯರವಾಡಕ್ಕೆ ಕಳಿಸಲ್ಪಟ್ಟು ಸೆರೆಮನೆಯಲ್ಲಿ ಸತತವಾಗಿ 33ತಿಂಗಳು ಇರಬೇಕಾಗಿ ಬಂದ ಕಥೆ ಬೇರೆ. ಅದು ಇಲ್ಲಿ ಅನಾವಶ್ಯಕ.

ಅಲ್ಲದೆ ಸರಕಾರಿ ಅಧಿಕಾರಿಗಳಲ್ಲಿ ಎಲ್ಲರೂ ದೇಶದ್ರೋಹಿಗಳೆಂದು ತಿಳಿಯುವುದು ಸೂಕ್ತವಾಗಲಾರದು. ಎಷ್ಟೋ ಅಧಿಕಾರಿಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ವೀಯುತ್ತಿದ್ದರು. ಅಂಥವರಲ್ಲಿ ನನ್ನಲ್ಲಿ ನಿಷ್ಠೆಯುಳ್ಳವರಾಗಿದ್ದ ಶೇಖ, ಎನ್. ಎಮ್. ಪಾಟೀಲರಂಥವರನ್ನು ನಾನು ಮರೆಯಲಾರೆ. ಆದರೆ ಹಾವೇರಿಯಲ್ಲಿ ಪೋಲಿಸ ಇನ್‌ಸ್ಪೆಕ್ಟರರಾಗಿದ್ದ ದಿ॥ ಪೈ ಹಾಗೂ ಹಿರೇಕೇರೂರಲ್ಲಿ ಸಬ್‌ಇನ್‌ಸ್ಪೆಕ್ಟರರಾಗಿದ್ದ ನದಾಫ ಅವರ ಅಮಾನುಷ ಹಾಗೂ ಹೇಯ ವರ್ತನೆಗಳು ಸ್ವಾತಂತ್ರ್ಯ ಹೋರಾಟಗಾರರನ್ನು ರೊಚ್ಚಿಗೆಬ್ಬಿಸಿದ್ದವು. ಜನತೆಯಲ್ಲಿದ್ದಂತೆ ಅಧಿಕಾರಿಗಳಲ್ಲೂ ಸ್ವಾತಂತ್ರ್ಯದ ಹೋರಾಟಕ್ಕೆ ಸಹಾನುಭೂತಿಯುಳ್ಳವರು ಇದ್ದೇ ಇದ್ದರು.

ಪಾಟೀಲ ಕಲ್ಲನಗೌಡ.

ಟಿಪ್ಪಣಿ ೨ :— ಬ್ಯಾಡಗಿ ರೇಲ್ವೆ ಸ್ಟೇಷನ್ ಮೇಲಿನ ಪಲ್ಲಿಯ ಪ್ರತಿಕ್ರಿಯೆ

ಬ್ಯಾಡಿಗಿ ಸ್ಟೇಶನ್ ಕೊಳ್ಳಿ ಹೊಡೆದ ಸಂದರ್ಭದಲ್ಲಿ ಕೈದುಮಾಡಿ ಚಾರ್ಜಸೀಟು ಹಾಕಿ ಶಿಕ್ಷೆ ಮಾಡಲ್ಪಟ್ಟವರಲ್ಲಿ ಕೆಲವರು ಪ್ರತ್ಯಕ್ಷಾ ಪ್ರತ್ಯಕ್ಷರಾಗಿ ಆ ಕಾರ್ಯಕ್ಕೆ ಏನೂ ಸಂಬಂಧವಿಲ್ಲದವರಿದ್ದರು. ಆದರೂ ಅವರು ಸೆರೆಮನೆ ವಾಸ ಅನುಭವಿಸಬೇಕಾಗಿ ಬಂದದ್ದು ಸುದೈವವೆಂದೇ ಈಗ ಹೇಳಬೇಕು. ಅವರಲ್ಲಿ ಒಬ್ಬರಾದ ಬ್ಯಾಡಗಿಯ ಫಿರೋಜಿ ಜಾಧವ ಎಂಬವರು ಎದೆಯೊಡೆದು ಕೊಂಡು ಜೈಲಿನಲ್ಲಿ ಮೃತರಾದುದು ದುರ್ದೈವವಾಗಿದೆ.

ರೇಲ್ವೆ ಸ್ಟೇಶನ್‌ಗಳ ಮೇಲೆ ಹಲ್ಲೆ ಮಾಡುವ ಕಾರ್ಯಕ್ರಮವು ಎಣ್ಣೆ ಕೊಪ್ಪದಲ್ಲಿ ಈ ನೊದಲೆ ಸೇರಿದ್ದ ಕಾರ್ಯಕರ್ತರ ಸಭೆಯಲ್ಲಿಯೇ ತೀರ್ಮಾನಿಸಲ್ಪಟ್ಟಿತ್ತು. ಆ ಪ್ರಕಾರ ೧೫-೯-೪೨ರ ರಾತ್ರಿ ಜಿಲ್ಲೆಯ ಅನೇಕ ಕಡೆ ಸ್ಟೇಶನ್‌ಗಳ ಮೇಲೆ ದಾಳಿನಡೆಸಲಾಯಿತು. ಬ್ಯಾಡಿಗಿಯ ಸ್ಟೇಶನ್ ಹಲ್ಲೆಯ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದವರಲ್ಲಿ ತಿಮ್ಮನಗೌಡ, ಕರಿಯಪ್ಪ ಸಂಗೂರ, ಸಂಗಪ್ಪ ಮತ್ತು ಸಣ್ಣಿಂಗಪ್ಪ ಕುದರಿಹಾಳ, ರಾಮನಾಥ ಭಿಲವಡಿ ವೀರಭದ್ರಪ್ಪ ನ್ಯಾಮತಿ ಮೊದಲಾದವರು ಪ್ರಮುಖರಾಗಿದ್ದರು. ನನ್ನ ಹುಟ್ಟೂರಾದ ಕಾಕೋಳದಲ್ಲಿ ಕೊನೆಯ ಗಳಿಗೆಯಲ್ಲ 3-4 ಕಡೆಗಳಿಂದ ತಂಡಗಳು ಬಂದು ಕೂಡಿಕೊಂಡು ಬ್ಯಾಡಿಗೆ ರೇಲ್ವೆ ಸ್ಟೇಶನಿಗೆ ಹೊರಟರು. ಆಮೇಲೆ ಖಟ್ಲೆ ಹಾಕಲ್ಪಟ್ಟವರಲ್ಲಿ ಕಾಕೋಳದವರೇ ಹೆಚ್ಚಾಗಿದ್ದಾರೆ. 3ರಿಂದ 5 ವರ್ಷದವರೆಗೆ ಕೆಲವರಿಗೆ ಶಿಕ್ಷೆ ಆಯಿತು. ಅವರಲ್ಲಿ ನನ್ನ ಅಣ್ಣಂದಿರಾದ ತಿರಕನ ಗೌಡರೂ ಒಬ್ಬರು. ಹನುಮಂತ ತಾಯಿಹಾಲವ್ವ, ದೊಡ್ಡ ಹನುಮಪ್ಪ, ದುರಗಪ್ಪ, ಮುಗದೂರ (ಮುರಲಿ) ಹಾಲಪ್ಪ ಮಾಳಿಗಿ, ಹನುಮಂತಪ್ಪ ಮಾಳಿಗಿ ಮೊದಲಾದ ಕೆಲ ಮಾದಿಗ ಜಾತಿಗೆ ಸೇರಿದವರೂ ಕಾರ್ಯಕರ್ತರಾಗಿ ಕೆಲಸಮಾಡಿ ೩ ವರ್ಷಗಳವರೆಗೆ ಶಿಕ್ಷೆ ಇಲ್ಲದೆ ಡೆಟೆನ್ಯೂಗಳಾಗಿ ಜೇಲುವಾಸ ಅನುಭವಿಸಿದರು. ಬ್ಯಾಡಿಗಿಯ ಬಸವಣ್ಣಪ್ಪ, ಮುರಿಗೆಪ್ಪ ಚಂದ್ರಪಟ್ಟಣ, ಸಂಗಪ್ಪ ಕುದರಿಹಾಳ ಮೊದಲಾದವರನ್ನು ಮುಂಬೈ ರಾಜ್ಯದಲ್ಲಿ ಕಾಂಗ್ರೇಸ ಸರಕಾರವು ರಚಿತವಾದ ಮೇಲೆ ಜೇರ ಮಂತ್ರಿ ಮಂಡಲವು ಬಿಡುಗಡೆ ಮಾಡಿತು.

ಪಾಟೀಲ ಕಲ್ಲನಗೌಡ

ಟಪ್ಪಣಿ ೩ :—

ಬ್ಯಾಡಗಿ ಹಿರೇಕೇರೂರ ಟಪಾಲ ಬಸ್ಸಿನ ಮೇಲೆ ಹಲ್ಲೆ

ಬ್ಯಾಡಗಿ ಹಿರೇಕೇರೂರ ಟಪಾಲ ಬಸ್ಸಿನ ಮೇಲೆ ಬಿದರಕಟ್ಟಿ ಹತ್ತಿರ ಹಲ್ಲೆ ಮಾಡಿದವರಲ್ಲಿ ತಿಮ್ಮನಗೌಡ, ಕರಿಯಪ್ಪ, ಶಿವಣ್ಣ, ಈ ಮೂರು ಗುಂಪು ಗಳ ಕೆಲಸಗಾರರೂ ಇದ್ದರು. ಅವರಲ್ಲಿ ಅನೇಕರು ಆಗಾಗ ಕೈದಾಗಿದ್ದರು ಧಾರವಾಡದಲ್ಲಿ ಅಂಥ ೨೧ ಜನರ ಮೇಲೆ ಖಟ್ಲೆ ಹಾಕಲಾಗಿತ್ತು. ಅವರಲ್ಲಿ (೧) ಪುಟ್ಟಪ್ಪ ಹನುಮಪ್ಪ ಹಾವೇರಿ (೨) ಬಸಪ್ಪ ಅಜ್ಜಪ್ಪ ಪರಪ್ಪಗೌಡರ (೩) ಕರಿಬಸಪ್ಪ ಅಡಿವೆಪ್ಪ ಅಡಿವೇರ ಎಂಬ ಮೂವರನ್ನು ನಿರ್ದೋಷಿಗಳೆಂದು ಬಿಡಲಾಗಿತ್ತು. ಉಳಿದ ೧೮ ಜನರಲ್ಲಿ ೭-೪-೪೩ ರಂದು ನಡೆದ ಖಟ್ಲೆ ವಿಚಾರಣೆಯಲ್ಲಿ ಹತ್ತು ಜನರನ್ನು ನಿರ್ದೋಷಿಗಳೆಂದು ಬಿಟ್ಟು ಬಿಡಲಾದರೂ ಕೂಡಲೆ ಅವರನ್ನು ಪುನಃ ಡಿಫೆನ್ಸ್ ಆಫ್ ಇಂಡಿಯಾ ರೂಲಿಸಿನ ಪ್ರಕಾರ ಕೈದುಮಾಡಿ ಡೆಟಿನ್ಯೂ ಮಾಡಿ ಸೆರೆಮನೆಗೆ ರವಾನಿಸಲಾಯಿತ್ತು. (೧)ಗುಡ್ಡಪ್ಪವಾಲಿಶಾರ (೨)ಬಸಪ್ಪ ಹೀರೆಳ್ಳಿ. (೩) ಮಲ್ಲಪ್ಪ ಗೂಳಪ್ಪಗೌಡರ (೪)ಮೆಲ್ಲಪ್ಪಕೊಪ್ಪದವರ (೫)ಮೂಕಪ್ಪಲಿಂಗನಗೌಡರ (೬)ಮಲ್ಲಪ್ಪ ವೀರಭಸಪ್ಪ (೭)ಗುಡ್ಡಪ್ಪತಳವಾರ (೮)ಮಾರಪ್ಪ ಹರವಿನಮನಿ (೯)ಚನ್ನಬಸಪ್ಪ ಮುತ್ತಳ್ಳಿ (೧೦) ರಾಮಚಂದ್ರಗೌಡಕೆ ಎಂಬವರೇ ಆ ಹತ್ತು ಜನರು.

ಇನ್ನುಳಿದ ೮ ಜನರಿಗೆ ೨ರಿಂದ ೫ವರ್ಷಗಳವರೆಗೆ ಶಿಕ್ಷೆ ವಿಧಿಸಲಾಯಿತು. ಅವರಲ್ಲಿ ೫ವರ್ಷ ಶಿಕ್ಷೆ ವಿಧಿಸಲ್ಪಟ್ಟವರೆಂದರೆ (೧) ಶ್ರೀಪತಿ ಅರ್ಕಾಚಾರಿ ಅಂತರವಳ್ಳಿ (೨) ಜಯದೇವ ನಾಗಪ್ಪಮ್ಯಾಗಳಗೇರಿ (೩) ವೆಂಕಪ್ಪ ಚೌಡಪ್ಪ ಬುಳ್ಳಕ್ಕನವರ (೪) ಹನುಮಂತ ಓಂಕಾರಪ್ಪ ಕೊಡ್ಲೇರ (೫) ಬಸಯ್ಯ ಹಿರೇಮಠ. (೬) ಚನ್ನಬಸಯ್ಯ ಪಟ್ಟಣಸೆಟ್ಟಿ ಇವರಿಗೆಲ್ಲ ತಲಾ ಮೂರು ವರ್ಷ ಸಜಾ ಆಯಿತು. ಉಳಿದ (೭) (೮) ಗಳಾದ ಮಲ್ಲೇಶಪ್ಪ ಮಲಕಪ್ಪ ಬಣಕಾರ ಚಿಕ್ಕೊಣತಿ ಇವರಿಗೆ ೪ವರ್ಷ, ಕರಿಯಪ್ಪ ಎರೇಸೀಮಿ ಸಂಗೂರ ಇವರಿಗೆ 5ವರ್ಷ ಶಿಕ್ಷೆ. ೧ ಶ್ರೀಪತಿ ಅರ್ಕಾಚಾರಿ ೨ ಜಯದೇವ ಮ್ಯಾಗಳಗೇರಿ ೩ ವೆಂಕಪ್ಪ ಬುಳ್ಳಕ್ಕನವರ ೪ ಬಸಯ್ಯ ಹಿರೇಮಠ. ೫ ಹನುಮಂತ ಕೊಡ್ಲೇರ ಇವರು ಅಲ್ಪ ವಯಿಗಳಾದ್ದರಿಂದ ಅವರನ್ನು ಜುವಿನಾಯಲ್ ಜೇಲಿಗೆ ಒಟ್ಟಿದರು.

ಟಿಪ್ಪಣಿ ೪ :—ಕುಪ್ಪೇಲೂರ ಹಪ್ತೆಲೂಟ ಪ್ರಕರಣದ ಪ್ರತಿಧ್ವನಿ
(೧೮-೨-೪೩)

(ರಾಣಿಬೆನ್ನೂರ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ
ಕ್ರಿಮಿನಾಲ್ ಕೇಸ್ ನಂ 76-೧೯೪೩ನೇ ಇಸ್ವಿ
೧-೧೧-೪೩ರಂದು ಆದ ತೀರ್ಪಿನ ಪ್ರಕಾರ)

ಆರೋಪಿತರ ಹೆಸರುಗಳು:—

(೧) ಗುಡ್ಡಪ್ಪ ನಿಂಗಪ್ಪ ಮೆಣಸಿನಹಾಳ (೨) ಗುಡ್ಡ್ಯಾದೊಡ್ಡ ನಿಂಗಪ್ಪ ಮಾಳಗಿ (೩) ಸಿದ್ದಪ್ಪ ಫಕೀರಪ್ಪ ತುಮ್ಮಿನಕಟ್ಟಿ (೪) ಸಿದ್ದನಗೌಡ ಹೇಮನಗೌಡ ಮೆಣಸಿನಹಾಳ (೫) ಚನ್ನಬಸಪ್ಪ ನಾಗಪ್ಪ (೬) ಹನುಮಾ ಹೊನ್ನಪ್ಪ ಕೂಸಗಟ್ಟಿ (೭) ಸಣ್ಣಿಂಗನಗೌಡ ಹಾಲಪ್ಪಗೌಡ ಮೆಣಸಿನಹಾಳ (೮) ಪುಟ್ಟಪ್ಪ ಹನುಮಪ್ಪ (೯) ಆಡಿವೆಪ್ಪ ಬುಳ್ಳಪ್ಪ ಅಂತರವಳ್ಳಿ (೧೦) ಲಕ್ಷ್ಮಪ್ಪ ಹನುಮಪ್ಪ (೧೧) ಯೆಂಕಪ್ಪ ಹನುಮಪ್ಪ (೧೨) ವೀರಪ್ಪ ಸಿದ್ದಮಲ್ಲಪ್ಪ ಹಿರೇಕೇರೂರ

ಆರೋಪ :— ಡಿಫೆನ್ಸ ಆಫ್ ಇಂಡಿಯಾ ರೂಲ್ಸದಲ್ಲಿ ೩೮ (೫) ನೇ ಮತ್ತು ಅವೇರೂಲ್ಸುಗಳಲ್ಲಿ ೩೪ (೬) ಮತ್ತು (೧) ಸೇರಿ—

ಘಟನೆ :— ೧೮-೨-೧೯೪೩ನೇ ಮಧ್ಯ ರಾತ್ರಿಯಲ್ಲಿ ಸದರಿ ಆರೋಪಿಗಳು ಕುಪ್ಪೇಲೂರ ಗ್ರಾಮದ ಚಾವಡಿ ಮೇಲೆ ಹಲ್ಲೆ ಮಾಡಿದರು. ಸರಕಾರಿ ಹಪ್ತೆ ವಸೂಲಿ ಕೇಂದ್ರವಾಗಿದ್ದು ಸರ್ಕಲ್ ಪೋಲಿಸರ ಭದ್ರಕಾಪಲಿತ್ತು. ಆರೋಪಿಗಳು ದಾಳಿಮಾಡಿ ಪೋಲಿಸರ ವಶದಲ್ಲಿದ್ದ ಬಂದೂಕು, ಬೆಯನಾಟ್ ಕಾಡತಾಸು ಯುನಿಪಾರ್ಮಡ್ರೆಸ್, ಮೊದಲಾದವುಗಳನ್ನು ಅಪಹರಿಸಿಕೊಂಡು ಹೋದುದೇ ಆ ಅಪರಾಧ.

ಈ ಕೇಸಿನಲ್ಲಿ ೧೨ನೇ ಆರೋಪಿಯನ್ನು ೨೧-೯-೪೩ರಂದು ಬಿಡುಗಡೆ ಮಾಡಲಾಗಿತ್ತು. ೧ಮತ್ತು೬ನೇ ಆರೋಪಿಯ ಮೇಲಿನ ಆರೋಪ ಸಿದ್ದವಾಗಲಿಲ್ಲ ವೆಂದು ಹೇಳಿ ಬಿಡುಗಡೆ ಆದರು ಉಳಿದವರಿಗೆ ಮೇಲ್ಕಾಣಿಸಿದ ರೂಲ್ಸ ಪ್ರಕಾರ ತಲಾ ೬ತಿಂಗಳ ಕಠಿಣ ಶಿಕ್ಷೆ ಹಾಗೂ ೫೦ ರೂ ದಂಡ (ದಂಡ ಕೊಡದ್ದಿದರೆ ಒಂದು ತಿಂಗಳ ಹೆಚ್ಚಿನ ಶಿಕ್ಷೆ) ವಿಧಿಸಲಾಯಿತು. ಪಂಚನಾಮೆಯಲ್ಲಿ ದೊರೆತ ಮಾಲುಮುದ್ದೆಯನ್ನು ಪೋಲಿಸರಿಗೆ ಹಾಗೂ ಸಂಬಂಧಪಟ್ಟವರಿಗೆ ಒಪ್ಪಿಸ ಲಾಯಿತು.

ಹಾರೀಕಟ್ಟೆ ಜಂಗಲ್ ಸತ್ಯಾಗ್ರಹ
18-1-1932

ಹಿರೇಕೇರೂರ ಫಸ್ಟಕ್ಲಾಸ ಸಮರಿ ಮ್ಯಾಜಿಸ್ಟ್ರೇಟರಾಗಿದ್ದ ಆರ್. ಪಿ. ವಾಗಳೇ ಅವರ ತೀರ್ಪಿನ ಸಾರಾಂಶ (19-1-1932) ಕೇಸ ನಂ. 6/1932 ಆರೋಪಿತರು :-1) ಹೇಮಪ್ಪ ವೀರಭದ್ರಪ್ಪ ಅಂಗಡಿ 2) ಕೊಟ್ರಪ್ಪನಬಿನ್ ಮುರಿಗಪ್ಪ ಹುಬ್ಬಳ್ಳಿ 3) ತಿಮ್ಮನಗೌಡ ಪನುಮಗೌಡ ಗೌಡರ ಮೆಣಸಿನ ಹಾಳ 4) ತುಳಜಪ್ಪ ಬಸಪ್ಪ ಆಡೂರ ಆರೇಮಲ್ಲಾಪುರ 5) ದೇವಪ್ಪ ಬಸಲಿಂಗಪ್ಪ ಕಡೂರವರ ತಡಕನಹಳ್ಳಿ ಹಾಗೂ ನಾಗವಂದದ 6) ಭರಮಪ್ಪ ಬಿನ್ ಸಿದ್ದಪ್ಪ 7) ಸಿದ್ದಪ್ಪ ಕಾಡಪ್ಪ ಹಿರೇಮರದ 8) ಬಸವರಾಜ ಜನ್ನ ಬಸವರಾಜ 9) ಶಾಂತವೀರಪ್ಪ ವೀರಪ್ಪ ಅಂಗಡಿ 10) ಗುರು ಶಾಂತಪ್ಪಯ್ಯ ವೀರಸಂಗಯ್ಯ ವಿರಕ್ತಮಠ.

1932ನೇ ಜನವರಿ 18 ರಂದು ನೂರಾರು ಸತ್ಯಾಗ್ರಹಿಗಳು ಹಾರೀಕಟ್ಟೆ ಅರಣ್ಯ ಸತ್ಯಾಗ್ರಹದಲ್ಲಿ ತೊಡಗಿ ಸರಕಾರದ ಗಂಧದ ಹಾಗೂ ತೇಗದ ಮರಗಳನ್ನು ಕಡಿಯುತ್ತಿದ್ದಾಗ ಹಿರೇಕೆರೂರ ಫೌಜದಾರರು ಅಲ್ಲಿಗೆ ಹೋಗಿ ಆನೇಕರನ್ನು ಕೈದುಮಾಡಿ ಮೇಲ್ಕಾಣಿಸಿದ ಹತ್ತು ಜನರ ಮೇಲೆ ಇಂಡಿಯನ್ ಫಾರೆಸ್ಟ್ ಆ್ಯಕ್ಟ ಎಸ್ 26 (ಬ) ಪ್ರಕಾರ ಖಟ್ಲೆ ಹಾಕಿದರು. ಕೈದಿಗಳು ಕೋರ್ಟಿನ ವಿವಾದದಲ್ಲಿ ಭಾಗವಹಿಸಲು ನಿರಾಕರಿಸಿದರು. 4 ನೆಯ ತುಳಜಪ್ಪನ ಹೊರತಾಗಿ ಎಲ್ಲರಿಗೂ 2 ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು. 9ನೆಯ ಶಾಂತವೀರಪ್ಪನಿಗೆ ಆಗ 15 ವರ್ಷವಾದ್ದರಿಂದ ಅವನನ್ನು ಧಾರವಾಡದ ಬೋರ್ಸ್ಟಲ್ ಸ್ಕೂಲಿಗೆ ಕಳಿಸಲಾಯಿತು. ತುಳಜಪ್ಪನು 14 ವರ್ಷದವನಾದ್ದರಿಂದ ಅವನಿಗೆ 15 ಫಟಿಗಿ ಏಟಿನ ಶಿಕ್ಷೆ ವಿಧಿಸಲಾಯಿತು. ಉಳಿದವರೆಲ್ಲ ಹಿಂಡಲಿಗೆ ಸೆರೆಮನೆಯಲ್ಲಿ 2 ವರ್ಷ ಕಠಿಣ ಶಿಕ್ಷೆ ಅನುಭವಿಸಿದರು.